ವಿಜಯಪುರ | ಸಂಪುಟ 02 | ಸಂಚಿಕೆ 81 | ಪುಟ 4 | ₹ 3.00

https://udayarashminews.com

udayarashmi 90088 88340

# ಉದಯರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಶುಕ್ರವಾರ, ಮೇ 17, 2024



“ಅಂಜಲಿ ಅಂಬಿಗೇರ ಅವರ ಹತ್ಯೆಯಾಗಿ ಎರಡು ದಿನಗಳು ಕಳೆದರೂ ಹಂತಕನನ್ನು ಬಂಧಿಸಲು ಪೊಲೀಸ್ ಇಲಾಖೆ ವಿಫಲವಾಗಿರುವುದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟು ಹೋಗಿರುವುದನ್ನು ಎತ್ತಿ ತೋರಿಸುತ್ತಿದೆ.”

– ಡಾ.ಗೌತಮ್.ಆರ್.ಚೌಧರಿ
ಬಿಜೆಪಿ ಮುಖಂಡರು

**ಪಾಕ್ ಆಕ್ರಮಿತ ಕಾಶ್ಮೀರ ಗೆ ಲಕ್ಷ್ಮಣ ರೇಖೆ ಇಲ್ಲ | ಅದು ಭಾರತದ ಅವಿಭಾಜ್ಯ ಅಂಗ | ಯಾರದೋ ತಪ್ಪಿನಿಂದ ತಾತ್ಕಾಲಿಕವಾಗಿ ಕೈತಪ್ಪಿ ಹೋಗಿದೆ**

# ಪಿಒಕೆ ದೇಶಕ್ಕೆ ಮರಳಿ ಸೇರ್ಪಡೆಯಾಗಲಿದೆ :ಜೈಶಂಕರ್

ನವದೆಹಲಿ: ಪಾಕ್ ಆಕ್ರಮಿತ ಕಾಶ್ಮೀರ(ಪಿಒಕೆ) ಭಾರತದ ಅವಿಭಾಜ್ಯ ಅಂಗವಾಗಿದ್ದು, ದೇಶಕ್ಕೆ ಮರಳಿ ಸೇರ್ಪಡೆಯಾಗಲಿದೆ ಎಂದು ವಿದೇಶಾಂಗ ಸಚಿವ ಎಸ್ ಜೈಶಂಕರ್ ಅವರು ಗುರುವಾರ



ಪುನರುಚ್ಚರಿಸಿದ್ದಾರೆ.

“ಕಿಒಪಿ ಭಾರತದ ಅವಿಭಾಜ್ಯ ಅಂಗವಾಗಿದೆ ಮತ್ತು ಅದಕ್ಕೆ ಯಾವುದೇ ಲಕ್ಷ್ಮಣ ರೇಖೆ ಇಲ್ಲ. ಯಾರದೋ ದೌರ್ಬಲ್ಯ ಮತ್ತು ತಪ್ಪಿನಿಂದ ಅದು ತಾತ್ಕಾಲಿಕವಾಗಿ ನಮ್ಮಿಂದ ದೂರವಾಯಿತು. ನಾವು ಒಂದು ದಿನ ಕಿಒಪಿ ಅನ್ನು ಮರಳಿ ಪಡೆಯುತ್ತೇವೆ ಎಂಬ ಸಂಸದೀಯ ನಿರ್ಣಯ ಇದೆ” ಎಂದು ಜೈಶಂಕರ್ ನಾಸಿಕ್‌ನಲ್ಲಿ ಹೇಳಿದ್ದಾರೆ.

“ಪಿಒಕೆಯಲ್ಲಿನ ಜನ, ನಿಯಂತ್ರಣ ರೇಖೆಯಾದ್ಯಂತ ಸಕಾರಾತ್ಮಕ ಬದಲಾವಣೆಗಳನ್ನು ನೋಡುತ್ತಿದ್ದಾರೆ. ವಿಷಯ ಹೀಗಿರುವುದರಿಂದ ಅಲ್ಲಿನ ಜನ ನಾವು ಏಕೆ ಬಳಲುತ್ತಿದ್ದೇವೆ ಮತ್ತು ನಾವು ಈ ರೀತಿಯ ದುರ್ವರ್ತನೆಯನ್ನು ಏಕೆ ಒಪ್ಪಿಕೊಳ್ಳಬೇಕು ಎಂದು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳುತ್ತಾರೆ ಎಂದು ವಿದೇಶಾಂಗ ಸಚಿವರು ತಿಳಿಸಿದರು.

ಮೇ 10 ರಿಂದ ಮುಜಫರಾಬಾದ್‌ನಲ್ಲಿ ಹಣದುಬ್ಬರ ಮತ್ತು ಹೆಚ್ಚುತ್ತಿರುವ ವಿದ್ಯುತ್ ವೆಚ್ಚದ ವಿರುದ್ಧ ಜನರು ಬೀದಿಗಿಳಿದಿದ್ದ-ರಿಂದ ಅಶಾಂತಿ ಮತ್ತು ರಾಜಕೀಯ ಪ್ರಕ್ಷುಬ್ಧತೆ ಉಂಟಾಗಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಇದೇ ವೇಳೆ, ಜೈಶಂಕರ್ ಅವರು ಕೆನಡಾದೊಂದಿಗೆ ರಾಜತಾಂತ್ರಿಕವಾಗಿ ಭಾರತ ಎದುರಿಸುತ್ತಿರುವ ಸವಾಲುಗಳ ಬಗ್ಗೆ ಮಾತನಾಡಿದರು, ಅಲ್ಲಿ ಸರ್ಕಾರವು ಖಲಿಸ್ತಾನಿ ಪರವಾಗಿ ಕೆಲಸ ಮಾಡುತ್ತಿದೆ ಎಂದರು.

## ಪಿಒಕೆ ಪಡೆಯುವುದು ಖಚಿತ : ಅಮಿತ್ ಶಾ

ಸೆರಾಂಪೋರ್: ಪಾಕ್ ಆಕ್ರಮಿತ ಕಾಶ್ಮೀರ ಭಾರತದ ಅವಿಭಾಜ್ಯ ಅಂಗ. ಅದನ್ನು ಮರಳಿ ಪಡೆಯುವುದು ಖಚಿತ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪುನರುಚ್ಚರಿಸಿದ್ದಾರೆ.

ಸೆರಾಂಪೋರ್‌ನಲ್ಲಿ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿರುವ ಅವರು, ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ನಡೆಯುತ್ತಿರುವ ಪ್ರತಿಭಟನೆ, ಹಿಂಸಾಚಾರವನ್ನು ಉಲ್ಲೇಖಿಸಿ ಮಾತನಾಡಿದರು.


370 ಕಾಯ್ದೆ ರದ್ದುಗೊಳಿಸಿದ ನಂತರ ಕಾಶ್ಮೀರದಲ್ಲಿ ಶಾಂತಿ ನೆಲೆಸಿದೆ, ಆದರೆ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಪ್ರತಿಭಟನೆಗಳು ಮೊಳಗಿವೆ. ಮೊದಲು ಆಜಾದಿ ಘೋಷಣೆಗಳು ಕೇಳಿದ್ದವು. ಇದೀಗ ಮತ್ತೆ ಅದೇ ಘೋಷಣೆಗಳು ಮೊಳಗುತ್ತಿವೆ. ಮೊದಲು ಭಾರತದ ಮೇಲೆ ಕಲ್ಲು ತೂರಾಟ ನಡೆಸಲಾಗುತ್ತಿತ್ತು. ಇದೀಗ ಪಾಕಿಸ್ತಾನದ ಮೇಲೆಯೇ ಕಲ್ಲು ತೂರಾಟ ನಡೆಯುತ್ತಿದೆ ಎಂದು ವ್ಯಂಗ್ಯವಾಡಿದರು



### ರಾಜ ನುಡಿ

ಅಸಲಿಗಿಂತ ಬಡ್ಡಿಯ ಮೇಲೆ ಮನುಷ್ಯನಿಗೆ ಒಲವು ಹೆಚ್ಚಂತೆ. ಹಾಗೆಯೇ ಅಜ್ಜ-ಅಜ್ಜಿಗೆ ಮಕ್ಕಳಿಗಿಂತ ಮೊಮ್ಮಕ್ಕಳ ಮೇಲೆ ಪ್ರೀತಿ ಜಾಸ್ತಿ. ಪ್ರೀತಿಗೆ ಮೇಲ್ಮುಖಕ್ಕಿಂತ ಇಳಿಮುಖ ಹರಿವಿನ ಪ್ರಮಾಣ ಹೆಚ್ಚು.

-ಡಾ. ರಾಜಶೇಖರ ನಾಗೂರ



### ವಚನ ಚಿಂತನ 381

*ನಿಂದೆ ಸ್ತುತಿಗಳಿಗೆ ಕಿವುಡನಾಗಿರಬೇಕು.*
*ಪರನಾರಿ ದ್ರವ್ಯಕ್ಕೆ ಅಂಧಕನಾಗಿರಬೇಕು.*
*ಶಬ್ದ ಸಂಭ್ರಮದ ತಾರ್ಕಿಕರೊಡನೆ*
*ಮಾಗಿಯ ಕೋಗಿಲೆಯಂತೆ*
*ಮೂಗನಾಗಿರಬೇಕು.*
*ಇವನಳಿದ ಶರಣರ ಹೃತ್ಕಮಲದೊಳಗೆತಾನು*
*ತಾನಾಗಿಹ ತ್ರೈಲೋಚನ ಮನೋಹರ*
*ಮಾಣಿಕೇಶ್ವರಲಿಂಗನು.*

ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ ಎಂಬ ವಚನಾಂಕಿತದ ಅಜ್ಞಾತ ವಚನಕಾರರು ಈ ವಚನದಲ್ಲಿ ಶರಣನು ಹೇಗಿರಬೇಕು ಎಂಬುದನ್ನು ವಿವರಿಸುತ್ತಾ ಮಾನಸಿಕ ಸ್ಥಿತಪ್ರಜ್ಞೆ ಕಾಯ್ದುಕೊಳ್ಳಲು ಸೂಚಿಸಿದ್ದಾರೆ. ವಚನದ ಪ್ರಾರಂಭದ ಸಾಲಿ ನಲ್ಲಿ ಸ್ತುತಿ-ನಿಂದೆಗಳಿಗೆ ಕಿವುಡನಾಗಿರಬೇಕು ಎಂಬುದು ಹೊಗಳಿಕೆ ತೆಗಳಿಕೆಗೆ ಕಿವಿ ಕೊಡುವುದ-ರಿಂದ ಸಾಧಿಸಬೇಕಾದ ಕಾರ್ಯಗಳಿಗೆ ಇವುಗಳು ತೊಂದರೆಯನ್ನು ಉಂಟು ಮಾಡುತ್ತವೆ.ಎಂಬುದನ್ನು ತಿಳಿಸಿದ್ದಾರೆ. ಅಕ್ಕಮಹಾದೇವಿಯವರು ಸಹ ತಮ್ಮ ಒಂದು ವಚನ ದಲ್ಲಿ ಸ್ತುತಿ ನಿಂದೆಗಳು ಬಂದರೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು ಎಂದು ಸೂಚಿಸಿದ್ದಾರೆ. ಮನಸ್ಸನ್ನು ಚಂಚಲಪಡಿಸುವ ಮತ್ತಷ್ಟು ಅಂಶಗಳೆಂದರೆ ಪರನಾರಿ ಮತ್ತು ಪರದ್ರವ್ಯ ,ಇವುಗಳ ಬಗ್ಗೆ ಅಂಧಕನಾಗಿರಬೇಕು ಎನ್ನುವುದು ಅವುಗಳನ್ನು ಮನಸ್ಸಿನಲ್ಲಿಯೂ ಸಹ ಬಯಸದಂತೆ ಮನೋನಿ ಗ್ರಹ ಪಡಿಸಿಕೊಳ್ಳಲು ತಿಳಿಸಿದ್ದಾರೆ. ಮುಂದುವ-ರಿದು ಮಾತಿನ ಮೊಡಿಯಲ್ಲಿ ಮರಳು ಮಾಡುತ್ತ ಶಬ್ದ ಜಾಲದಲ್ಲಿ ಗೆದ್ದೆನೆಂದು ಬೀಗುವವರೆದರು ಮೂಗನಾಗಿರಬೇಕು. ಹೇಗೆಂದರೆ ಎದುರಿನ ಪಕ್ಷಿಯು ಕರ್ಕಶವಾಗಿ ಹಾಡುತ್ತಿದ್ದರು ಅದಕ್ಕಿಂತಲೂ ಇಂಪಾದ ಧ್ವನಿಯನ್ನು ಹೊರಹೊಮ್ಮಿಸಲು ತನ್ನಿಂದಸಾಧ್ಯವೆಂದು ಗೊತ್ತಿದ್ದ ರೂ ಸಹ ಮಾಗಿಯ ಕೋಗಿಲೆ ಅವಕಾಶಕ್ಕಾಗಿ ಕಾಯುತ್ತಾ ಹೇಗೆ ಮೌನವಾಗಿರುತ್ತದೆಯೋ ಹಾಗಿರಬೇಕು ಎಂದಿರುವರು. ಮೋಳಿಗೆ ಮಾರಯ್ಯನವರು ಇದೇ ಭಾವದಲ್ಲಿ “ಪರಬ್ರಹ್ಮವ ನುಡಿಯುತ್ತ, ಪರದ್ರವ್ಯವ ಕೈಯಾಂತು ಬೇಡುತ್ತ, ಮಾತಿನಲ್ಲಿ ಶೂನ್ಯತನ, ಮನ ದಲ್ಲಿ ಆಶೆಯೆಂಬ ತೊರೆ ಹಾಯಬಾರದೆ ಹರಿವುತ್ತಿದೆ. ಮತ್ತೆಂತ ಯ್ಯ ಪರಬ್ರಹ್ಮದ ಮಾತು ? ಇದು ಎನಗೆ ಹೇಸಿಕೆಯಾಯಿತ್ತು, ನಿಃಕಳಂಕ ಮಲ್ಲಿಕಾರ್ಜುನಾ.” ಎಂದಿದ್ದಾರೆ. ಇದು ಅಂದಿನ ವಚನ ಕಾರರು ನೂತನ ಸಮಾಜವನ್ನು ಕಟ್ಟುವಲ್ಲಿ ಅವರು ತೋರಿದ ಕಾಳಜಿಯನ್ನು ವ್ಯಕ್ತಪಡಿಸುತ್ತದೆ.ಇಂದಿಗೂ ಇದು ಸತ್ಯವಾಗಿದೆ..

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

## ಜಂಬಗಿ ಕೆರೆಗೆ ನೀರು ಬಿಡಲು ಆಗ್ರಹಿಸಿ ರೈತರ ಅನಿರ್ದಿಷ್ಟ ಧರಣಿ

**ಉದಯರಶ್ಮಿ ನ್ಯೂಸ್**




ವಿಜಯಪುರ: ಕೆರೆಗೆ ನೀರು ತುಂಬಿಸುವಂತೆ ಆಗ್ರಹಿಸಿ ಜಂಬಗಿ ಕೆರೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಹಾಗೂ ಜಂಬಗಿ, ಆಹೇರಿ, ಅಂಕಲಗಿ, ಹುಣಶ್ಯಾಳ, ಮಾದಾಳ ಗ್ರಾಮದ

ನೂರಾರು ರೈತರು ಗುರುವಾರ ಟೆಂಟ್ ಹಾಕಿ ಹಸಿರು ಧ್ವಜ ಹಿಡಿದು ಜಿಲ್ಲಾಧಿಕಾರಿ ಹಾಗೂ ಕೆ.ಬಿ.ಜೆ.ಎನ್.ಎಲ್ ಅಧಿಕಾರಿಗಳ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗುತ್ತಾ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಪ್ರಾರಂಭಿಸಿದರು.

ಜಂಬಗಿ ಗ್ರಾಮದ ಮಾಜಿ ಗ್ರಾ.ಪಂ ಸದಸ್ಯ ಸಂಗಮೇಶ ಗುದಳೆ ಅವರು ಮಾತನಾಡುತ್ತಾ, ಜಂಬಗಿ ಕೆರೆ ಜಿಲ್ಲೆಯಲ್ಲಿಯೇ 2ನೇ ಅತಿದೊಡ್ಡ ಕೆರೆಯಾಗಿದ್ದು, ಹಾಗೂ ಹುಣಶ್ಯಾಳ (ಮಾದಾಳ) ಕೆರೆಗಳಲ್ಲಿ ನೀರು ತುಂಬಿದರೆ ಸುತ್ತಮುತ್ತಲಿನ 5-6 ಹಳ್ಳಿಗಳ ರೈತರಿಗೆ ಜನ ಜಾನುವಾರುಗಳಿಗೆ ಕುಡಿಯಲು ನೀರಿನ ಅನುಕೂಲವಾಗುವುದು ಮಾತ್ರವಲ್ಲದೇ, ಅಂತರ್ಜಲ ಮಟ್ಟ ಹೆಚ್ಚಾಗಿ ನೀರಿನ ಮೂಲಗಳು ಅಭಿವೃದ್ಧಿ ಹೊಂದುತ್ತವೆ. ಈಗ ಕೆರೆ ನೀರು ಖಾಲಿಯಾಗಿ ಜಾನುವಾರುಗಳಿಗೂ ಕುಡಿಯಲು ನೀರು ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಕೂಡಲೇ ಈ ಎಲ್ಲಾ ಕೆರೆಗಳನ್ನು ತುಂಬಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಸಂಚಾಲಕ ರಾಮನಗೌಡ ಪಾಟೀಲ ಅವರು ಮಾತನಾಡುತ್ತಾ, ಜಿಲ್ಲೆಯ ಎಲ್ಲಾ ಕೆರೆಗಳು ತುಂಬುತ್ತಿದ್ದರು, ಜಂಬಗಿ ಹಾಗೂ ಹುಣಶ್ಯಾಳ ಕೆರೆ ಮಾತ್ರ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ನೀರು ತುಂಬದೇ ಪುರಾಣ ಹೇಳುತ್ತಿದ್ದಾರೆ, ಅನೇಕ ಬಾರಿ ಕರೆ ಮಾಡಿದರೂ ಇಲ್ಲ ಸಲ್ಲದ ಕಥೆ ಹೇಳಿ ಹೋರಾಟದ ಸ್ಥಳಕ್ಕೆ ಬರದೇ ತಲೆ ತಪ್ಪಿಸಿಕೊಳ್ಳುತ್ತಿದ್ದಾರೆಎಂದರು.

ಮುಖಂಡ ಪ್ರಕಾಶ ದಿಂಡವಾರ ಮಾತನಾಡುತ್ತಾ, ರಾಂಪೂರ ವ್ಯಾಪ್ತಿಯಿಂದ ನಮಗೆ ಬರುವುದು ಅಸಾಧ್ಯದ ಮಾತು, ಸಮೀಪದ ಕಗ್ಗೊಡ ಗ್ರಾಮದಲ್ಲಿರುವ ಮುಖ್ಯ ಕಾಲುವೆಗಳಿಂದ ಹಳ್ಳದ ಮೂಲಕ ಜಂಬಗಿಯ ಕೆರೆ ನೀರು ತುಂಬಿಸಬಹುದು ಎಂದು ಸಲಹೆ ನೀಡಿದರು.

ಈ ವೇಳೆ ರೈತ ಸಂಘದ ಜಿಲ್ಲಾಧ್ಯಕ್ಷ ಸಂಗಮೇಶ ಸಗರ, ಮುಖಂಡರಾದ ಗ್ರಾ.ಪಂ ಅಧ್ಯಕ್ಷರಾದ ಶ್ರೀಶೈಲ ಮಸೂತಿ, ಸದಸ್ಯರಾದ ಸುರೇಶ ತಳವಾರ, ಮುತ್ತಪ್ಪ ನಾಯ್ಕೋಡಿ, ಮಾಜಿ ಸದಸ್ಯರಾದ ರಮೇಶ ಕೋಣಸಿರಸಗಿ, ಶರಣಪ್ಪ ಜಮಖಂಡಿ, ರಾಮಣ್ಣ ಸವಳಿ, ನಿಂಗಪ್ಪ ಗೇರಡೆ, ಆಹೇರಿ ಗ್ರಾ.ಪಂ ಮಾಜಿ ಅಧ್ಯಕ್ಷರು ಬಸವರಾಜ ಗಾಣಗೇರ, ಬಸವರಾಜ ಮಸೂತಿ, ರಾಮಸಿಂಗ ರಜಪೂತ, ಅನಮೇಶ ಜಮಖಂಡಿ, ನಿಜಲಿಂಗಪ್ಪ ತೇಲಿ, ಬಸನಗೌಡ ಬಿರಾದಾರ, ಮಲ್ಲಿಕಾರ್ಜುನ ನಾಗಠಾಣ, ಬಸವಂತ ತೇಲಿ, ಮಹದೇವಪ್ಪ ತೇಲಿ, ಸಾತಲಿಂಗಯ್ಯ ಸಾಲಿಮಠ, ಮಹಾದೇವ ಕದಮ, ಕಲ್ಲಪ್ಪ ಪಾರಶೆಟ್ಟಿ, ರಾಜು ಹೊನ್ನಳ್ಳಿ, ಬಸಯ್ಯ ಆಲಗೋಡ, ಮಹಿಳಾ ಮುಖಂಡರಾದ ಗಂಗೂಬಾಯಿ ಹಚಡದ, ಸಂಗೀತಾ ರಾಠೋಡ ಸೇರಿದಂತೆ ಅನೇಕರು ಇದ್ದರು.

## ಕಾಲುವೆಗಳ ಕ್ಲೋಜರ್ ಕಾಮಗಾರಿಗೆ ಅನುದಾನ ಬಿಡುಗಡೆಗೆ ಆಗ್ರಹ

**ಉದಯರಶ್ಮಿ ನ್ಯೂಸ್**

ವಿಜಯಪುರ: ಲಾಲ್ ಬಹಾದ್ದೂರ ಶಾಸ್ತ್ರಿ ಜಲಾಶಯದ ವ್ಯಾಪ್ತಿಗೆ ಬರುವ ಮುಳವಾಡ ಹಾಗೂ ಚಿಮ್ಮಲಗಿ ಏತ ನೀರಾವರಿಗೆ ಸಂಬಂಧಿಸಿದ ಎಲ್ಲ ಕಾಲುವೆಗಳ ಕ್ಲೋಜರ್ ಕಾಮಗಾರಿಗಳನ್ನು ನಡೆಸಲು ರಾಜ್ಯ ಸರ್ಕಾರ ಕೂಡಲೇ ಅನುದಾನ ಬಿಡುಗಡೆಗೊಳಿಸಬೇಕೆಂದು ಆಗ್ರಹಿಸಿ ಅಖಂಡ ಕರ್ನಾಟಕ ರೈತ ಸಂಘದ ವತಿಯಿಂದ ಜಿಲ್ಲಾಧಿಕಾರಿ ಟಿ.ಭೂಬಾಲನ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.



ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಮಾತನಾಡಿ, ಕ್ಲೋಜರ್ ಕಾಮಗಾರಿ ನಡೆಸಲು (ಹೂಳು ಹಾಗೂ ಗಿಡಗಂಟಿಗಳ ತೆರವುಗೊಳಿಸುವ ಕಾರ್ಯ) ಅನುದಾನ ಇಲ್ಲದ ಕಾರಣ ಕಾಲುವೆಗಳನ್ನು ತುಂಬಿರುವ ಹೂಳು ಹಾಗೂ ಗಿಡಗಂಟಿಗಳನ್ನು ತೆರವುಗೊಳಿಸಲು ಸಾಧ್ಯವಾಗುತ್ತಿಲ್ಲ ಎಂದು ಕೆಬಿಜೆಎನ್-ಎಲ್ ಅಧಿಕಾರಿಗಳು ಹೇಳುತ್ತಿದ್ದಾರೆ. ಕಳೆದ ವರ್ಷವೂ ಕೂಡ ಕ್ಲೋಜರ್ ಕಾಮಗಾರಿ ನಡೆಸಲಿಲ್ಲ ಇದಿರಂದ ಎಲ್ಲ ಕಾಲುವೆಗಳಲ್ಲಿ ಮಣ್ಣು ತುಂಬಿ ಗಿಡಗಂಟಿಗಳು ಬೆಳೆದಿವೆ. ಕಾಲುವೆಗಳಿಗೆ ನೀರು ಹರಿಸಿದ ಸಂದರ್ಭದಲ್ಲಿ ನೀರು ಮುಂದೆ ಸಾಗದೆ ಹೊಲಗಳಲ್ಲಿ ನೀರು ನುಗ್ಗಿ ಬೆಳೆ ಹಾಳಾಗಿ ಮಣ್ಣು ಕೂಡ ಕೊಚ್ಚಿ ಹೋಗುತ್ತಿದೆ. ಅದು ಅಲ್ಲದೇ ಕಾಲುವೆ ಕೊನೆ ಅಂಚಿನವರೆಗೆ ನೀರು ತಲುಪುವುದಿಲ್ಲ. ಇದರಿಂದ ಕೊನೆ ಅಂಚಿನಲ್ಲಿರುವ ರೈತರು ನೀರಿನಿಂದ ವಂಚಿತರಾಗುತ್ತಿದ್ದಾರೆ. ಮತ್ತು ಕೆರೆಗಳಿಗೂ ಕೂಡ ನೀರು ತಲುಪಿಲ್ಲ. ಇದರಿಂದ ಬೇಸಿಗೆ ಸಂದರ್ಭದಲ್ಲಿ ಜನ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗುತ್ತಿದೆ. ಈ ಕುರಿತು ಕೆಬಿಜೆ-ಎನ್ ಎಲ್ ಅಧಿಕಾರಿಗಳನ್ನು ಕೇಳಿದರೆ ಕ್ಲೋಜರ್ ಕಾಮಗಾರಿಗಳಿಗಾಗಿ ಹಣ ಬಿಡುಗಡೆಗೊಳಿಸಲು ಹಲವಾರು ಬಾರಿ ಸರ್ಕಾರಕ್ಕೆ ಮನವಿ ಮಾಡಿಕೊಂಡರು ಅನುದಾನ ಕೊಡುತ್ತಿಲ್ಲ ಎಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಪ್ರತಿ ವರ್ಷವೂ ಕಾಲುವೆಗಳ ನಿರ್ವಹಣಾ ವೆಚ್ಚವನ್ನು ಕಡ್ಡಾಯವಾಗಿ ರಾಜ್ಯ ಸರ್ಕಾರ ಕೊಡಬೇಕು. ಆದರೆ ಸರ್ಕಾರವು ಈ ವರ್ಷವು ಕೂಡ ಕ್ಲೋಜರ್ ಕಾಮಗಾರಿಗೆ ಹಣ ನೀಡದೆ ಆರ್ಥಿಕ ಮಿತವ್ಯಯದ ನೆಪ ಹೇಳುತ್ತಿದೆ. ಇದರಿಂದ ಕ್ಲೋಜರ್ ಕಾಮಗಾರಿ ನಡೆಯುವುದು ಅನುಮಾನವಾಗಿದೆ. ಆದ್ದರಿಂದ ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ಕಾಲುವೆಗಳ ಕ್ಲೋಜರ್ ಕಾಮಗಾರಿ ನಡೆಸಲು ಅದಕ್ಕೆ ತಗಲುವ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಸದಾಶಿವ ಬರಟಗಿ, ಹೊನಕೇರೆಪ್ಪ ತೆಲಗಿ, ಗುರಲಿಂಗಪ್ಪ ಪಡಸಲಗಿ, ಬಸವರಾಜ ಜಂಗಮಶೆಟ್ಟಿ, ಸಿಕಂದರ ಕರ್ಜಗಿ, ಸಂಪತ್‌ಕುಮಾರ ಕುಲಕರ್ಣಿ, ಸಂಜೀವ ಕುಲಕರ್ಣಿ, ಗುರುರಾಜ ಕುಲಕರ್ಣಿ, ದಾವಲಸಾಬ ನಧಾಪ್, ಗಿರಮಲ್ಲಪ್ಪ ದೊಡಮನಿ, ಚನಬಸಪ್ಪ ಸಿಂಧೂರ, ಪ್ರಹ್ಲಾದ ನಾಗರಾಳ ಸೇರಿದಂತೆ ಮುಂತಾದವರು ಉಪಸ್ಥಿತ-ರಿದ್ದರು.

## ಅಂಜಲಿ ಹತ್ಯೆ ಆರೋಪಿ ಬಂಧಿಸಲು ಡಾ.ಗೌತಮ್ ಚೌಧರಿ ಆಗ್ರಹ

**ಉದಯರಶ್ಮಿ ನ್ಯೂಸ್**

ವಿಜಯಪುರ: ಅಂಜಲಿ ಅಂಬಿಗೇರ ಅವರ ಹತ್ಯೆಯಾಗಿ ಎರಡು ದಿನಗಳು ಕಳೆದರೂ ಹಂತಕನನ್ನು ಬಂಧಿಸಲು ಪೊಲೀಸ್ ಇಲಾಖೆ ವಿಫಲವಾಗಿರುವುದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟು ಹೋಗಿರುವುದನ್ನು ಎತ್ತಿ ತೋರಿಸುತ್ತಿದೆ ಎಂದು ಬಿಜೆಪಿ ಮುಖಂಡ ಗೌತಮ್ ಆರ್. ಚೌಧರಿ ಆರೋಪಿಸಿದ್ದಾರೆ.



ಈ ಕುರಿತು ಗುರುವಾರ ಪತ್ರಿಕಾ ಹೇಳಿಕೆ ನೀಡಿದ ಅವರು, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ರಾಜ್ಯದಲ್ಲಿ ಪದೆ ಪದೇ ಇಂತಹ ಪ್ರಕರಣಗಳು ದಾಖಲಾಗುತ್ತಿರುವುದಕ್ಕೆ ರಾಜ್ಯ ಸರಕಾರ ಕಠಿಣ ಕ್ರಮ ತೆಗೆದುಕೊಳ್ಳದಿರುವುದೇ ಕಾರಣವಾಗಿದೆ ಎಂದು ಆಪಾದಿಸಿದ್ದಾರೆ.

ರಾಜ್ಯ ಸರಕಾರದ ನಿಷ್ಕ್ರೀಯ ನಡೆ ಖಂಡನೀಯವಾಗಿದೆ. ಅಂಜಲಿ ಅಂಬಿಗೇರ ಅವರ ಕುಟುಂಬದ ಆಸರೆಯಾಗಿದ್ದರು. ಅವರ ಹತ್ಯೆಯಿಂದ ಅವರ ಕುಟುಂಬ ಬೀದಿಪಾಲಾಗಿದ್ದು ಈ ಕೂಡಲೇ ರಾಜ್ಯ ಸರಕಾರ ಅವರ ಕುಟುಂಬಕ್ಕೆ ಸೂಕ್ತವಾದ ಪರಿಹಾರವನ್ನೊದಗಿಸಿ ಹಂತಕನನ್ನು ಬಂಧಿಸಿ ಶಿಕ್ಷೆಗೊಳಪಡಿಸಬೇಕೆಂದು ಬಿಜೆಪಿ ಮುಖಂಡ ಡಾ.ಗೌತಮ್.ಆರ್.ಚೌಧರಿ ಆಗ್ರಹಿಸಿದ್ದಾರೆ.

**ಎಸ್ಸೆಸ್ಸೆಲ್ಸಿ-2 ಪರೀಕ್ಷೆಗೆ ವಿಶೇಷ ತರಗತಿ ನಡೆಸುವಂತೆ ಸರ್ಕಾರ ನೀಡಿದ ನಿರ್ದೇಶನ ಹಿಂಪಡೆಯಲು ಆಗ್ರಹ**

## ಸರ್ಕಾರದ ನಿರ್ದೇಶನದಿಂದ ಶಿಕ್ಷಕ ಸಮೂಹಕ್ಕೆ ಆಘಾತ :ಶಹಾಪೂರ

**ಉದಯರಶ್ಮಿ ನ್ಯೂಸ್**

ಬೆಂಗಳೂರು: ಎಸ್.ಎಸ್.ಎಲ್.ಸಿ ಎರಡನೇ ಅವಧಿಯ ಪರೀಕ್ಷೆಗಾಗಿ ‘ವಿಶೇಷ ತರಗತಿ’ ಗಳನ್ನು ನಡೆಸುವಂತೆ ನೀಡಿರುವ ನಿರ್ದೇಶನ ಮತ್ತು ಜ್ಞಾಪನ ಆದೇಶವನ್ನು ಹಿಂಪಡೆಯಬೇಕೆಂದು ಆಗ್ರಹಿಸಿ ಕನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ ಶಹಾಪೂರ ಮತ್ತು ಸಂಘದ ರಾಜ್ಯಾಧ್ಯಕ್ಷ ಸಂದೀಪ ಬೂದಿಹಾಳ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.



ಈ ವೇಳೆ ಮಾತನಾಡಿದ ಅವರು, 2023-24ನೇ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಪರೀಕ್ಷೆ-1 ರಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ‘ವಿಶೇಷ ತರಗತಿ’ ಗಳನ್ನು ನಡೆಸುವಂತೆ ನೀಡಿರುವ ನಿರ್ದೇಶನ ಶಿಕ್ಷಕ ಸಮೂಹಕ್ಕೆ ತೀವ್ರ ಆಘಾತವುಂಟಾಗಿದೆ. ಪರೀಕ್ಷೆ, ಮೌಲ್ಯಮಾಪನ ಕಾರ್ಯ ಮತ್ತು ಚುನಾವಣಾ ಕರ್ತವ್ಯ ನಿರ್ವಹಿಸಿ ಈಗಷ್ಟೇ ಬೇಸಿಗೆ ರಜೆ ಮೇಲೆ ತೆರಳಿರುವ ಶಿಕ್ಷಕರು ಈ ರೀತಿಯ ಸುತ್ತೋಲೆಗಳಿಂದ ತಿನ್ನತೆಗೆ ಒಳಾಗಾಗಿದ್ದಾರೆ. ಶಿಕ್ಷಕರು ರಜಾ ಸಹಿತ ನೌಕರರ ವರ್ಗಕ್ಕೆ ಸೇರಿದ್ದು, ರಜಾ ಅವಧಿಯಲ್ಲಿ ವೈದ್ಯಕೀಯ ಚಿಕಿತ್ಸೆಗಳು, ಕುಟುಂಬ ಪ್ರವಾಸ ಮತ್ತು ಕೌಟುಂಬಿಕ ಪೂರ್ವ ನಿಯೋಜಿತ ಕಾರ್ಯಗಳಿಗೆ ಬೇರೆ ಬೇರೆ ಸ್ಥಳಗಳಿಗೆ ತೆರಳಿರುವುದರಿಂದ ಈ ಸಮಯದಲ್ಲಿ ಶಾಲಾ ಕರ್ತವ್ಯಕ್ಕೆ ಹಾಜರಾಗಿ ವಿಶೇಷ ತರಗತಿ ನಡೆಸಲು ಸಾಧ್ಯವಾಗುವುದಿಲ್ಲ. ಕೇವಲ 14 ದಿವಸ ಮಾತ್ರ ಬೇಸಿಗೆ ರಜೆ ಉಳಿದಿರುವುದರಿಂದ ತಾವು ನೀಡಿರುವ ನಿರ್ದೇಶನವನ್ನು ಹಿಂಪಡೆದು ಶಿಕ್ಷಕರಿಗೆ ಮತ್ತು ಅವರ ಕುಟುಂಬಕ್ಕೆ ನೆಮ್ಮದಿಯ ವಾತಾವರಣ ಕಲ್ಪಿಸಬೇಕೆಂದು ಆಗ್ರಹಿಸಿದರು.

# ಸಿ.ಬಿ.ಎಸ್.ಸಿ ಪರೀಕ್ಷೆ: ಬಿ.ಎಂ.ಪಾಟೀಲ ಪಬ್ಲಿಕ್ ಶಾಲೆ ಉತ್ತಮ ಸಾಧನೆ



ವಿಜಯಪುರ: ಇತ್ತೀಚೆಗೆ ನಡೆದ ಸಿ.ಬಿ.ಎಸ್.ಸಿ 10 ನೇ ತರಗತಿ ಪರೀಕ್ಷೆಯಲ್ಲಿ ಬಿ.ಎಲ್.ಡಿ.ಇ ಸಂಸ್ಥೆಯ ಶ್ರೀ ಬಿ.ಎಂ.ಪಾಟೀಲ ಪಬ್ಲಿಕ್ ಶಾಲೆ ವಿದ್ಯಾರ್ಥಿ ಮಿಹೀರ್ ಮಹೇಶ ದೇಶಪಾಂಡೆ ಶೇ.98 ಅಂಕ ಪಡೆದು ವಿಜಯಪುರ ಮತ್ತು ಬಾಗಲಕೋಟೆ ಎರಡು ಜಿಲ್ಲೆಗಳಿಗೆ ದ್ವಿತೀಯ ಗಳಿಸಿದ್ದಾನೆ. ಅಲ್ಲದೇ, ಈ ಪರೀಕ್ಷೆಯಲ್ಲಿ ಎಲ್ಲ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿ ಪಾಸಾಗುವ ಮೂಲಕ ಶಾಲೆ ಶೇ.100 ರಷ್ಟು ಫಲಿತಾಂಶ ದಾಖಲಿಸಲು ಕಾರಣರಾಗಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ಶಾಲೆಯ ಪ್ರಾಚಾರ್ಯ ಬಂದನಾ ಬ್ಯಾನರ್ಜಿ, ಈ ಬಾರಿ ಸಿ.ಬಿ.ಎಸ್.ಸಿ ಪರೀಕ್ಷೆಗೆ 101 ವಿದ್ಯಾರ್ಥಿಗಳು ಹಾಜರಾಗಿದ್ದು, ಎಲ್ಲರೂ ಉತ್ತೀರ್ಣರಾಗಿದ್ದಾರೆ. ಹೃದಯ ದೇವೇಂದ್ರ ಕೋಠಾರಿ ಶೇ.97.60 ಅಂಕ ಗಳಿಸಿ ಶಾಲೆಗೆ ದ್ವಿತೀಯ ಹಾಗೂ ನಿಶಿತಾ ವಿ ಶಹಾ ಶೇ.97.20 ಅಂಕ ಪಡೆದು ಶಾಲೆಗೆ ತೃತೀಯ ಸ್ಥಾನ ಪಡೆದು ಸಂಸ್ಥೆಗೆ ಮತ್ತು ಶಾಲೆಗೆ ಕೀರ್ತಿ ತಂದಿದ್ದಾರೆ. ಅಲ್ಲದೇ, 17 ವಿದ್ಯಾರ್ಥಿಗಳು ಶೇ.90 ಕ್ಕಿಂತಲೂ ಹೆಚ್ಚು ಅಂಕ, 52 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಹಾಗೂ 21 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಗಾಗೂ 11 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ.

ಪರೀಕ್ಷೆಯಲ್ಲಿ ಸಾಧನೆ ಮೂಲಕ ಶ್ರೀ ಬಿ.ಎಂ.ಪಾಟೀಲ ಪಬ್ಲಿಕ್ ಶಾಲೆ ಶೇ.100 ರಷ್ಟು ಫಲಿತಾಂಶ ದಾಖಲಾಗಲು ಕಾರಣರಾದ ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕ ಹೊರತಾದ ಸಿಬ್ಬಂದಿಗಳಿಗೆ ಆಡಳಿತ ಮಂಡಳಿ ಅಭಿನಂದನೆ ಸಲ್ಲಿಸಿದೆ ಎಂದು ಬಂದನಾ ಬ್ಯಾನರ್ಜಿ ತಿಳಿಸಿದ್ದಾರೆ.

# ಡೆಂಗ್ಯೂ ಜ್ವರಕ್ಕೆ ಭಯ ಬೇಡ ಮುನ್ನೆಚ್ಚರಿಕೆ ಬೇಕು :ಡಾ.ಜಾನ್

**ಉದಯರಶ್ಮಿ ನ್ಯೂಸ್**

ಚಡಚಣ: ಡೆಂಗ್ಯೂ ಜ್ವರವು ಸೋಂಕಿತ ಹೆಣ್ಣು ಸೊಳ್ಳೆಗಳ ಕಚ್ಚುವಿಕೆಯ ಮೂಲಕ ಹರಡುತ್ತದೆ. ಪ್ರಾಥಮಿಕವಾಗಿ ಈಡಿಸ್ ಮತ್ತು ಈಜಿಪ್ಟಿ ಮತ್ತು ಈಡಿಸ್ ಅಲ್ಬೋಪಿಕ್ಟಸ್. ಈ ರೋಗವು ಅಧಿಕ ಜ್ವರದಂತಹ ರೋಗಲಕ್ಷಣಗಳೊಂದಿಗೆ ಪ್ರಕಟವಾಗುತ್ತದೆ ಮತ್ತು ತೀವ್ರತರವಾದ ಪ್ರಕರಣಗಳಲ್ಲಿ ಹೆಮರಾಜಿಕ್ ಜ್ವರ, ದೀರ್ಘಕಾಲದ ತಲೆನೋವು ಮತ್ತು ಸ್ನಾಯು ಮತ್ತು ಕೀಲು ನೋವುಗಳಿಗೆ ಕಾರಣವಾಗುತ್ತದೆ. ಆರಂಬಿಕ ಪತ್ತೆ ಮತ್ತು ಚಿಕಿತ್ಸೆಗಾಗಿ ಚಿಹ್ನೆಗಳು ಮತ್ತು ರೋಗಲಕ್ಷಣಗಳನ್ನು ಗುರುತಿಸುವುದು ಅತ್ಯಗತ್ಯ. ಡೆಂಗ್ಯೂ ಜ್ವರಕ್ಕೆ ಭಯ ಬೇಡ ಮುನ್ನೆಚ್ಚರಿಕೆ ಬೇಕು ಎಂದು




ಚಡಚಣ ಸಮುದಾಯ ಆರೋಗ್ಯ ಕೇಂದ್ರದ ಆಡಳಿತಾಧಿಕಾರಿ ಡಾ.ಜಾನ್ ಕಟವಟಿಯವರು ಹೇಳಿದರು.

ಗುರುವಾರದಂದು ಚಡಚಣ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದ ವತಿಯಿಂದ ಹಮ್ಮಿಕೊಂಡಿದ್ದ 'ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ' ಅಂಗವಾಗಿ ಹಮ್ಮಿಕೊಂಡಿದ್ದ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ವೇಳೆಯಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಆರ್.ಬಿ.ಲಾಳಸಂಗಿಯವರು ಮಾತನಾಡುತ್ತ, ಸೊಳ್ಳೆಗಳ ಸಂತಾನೋತ್ಪತ್ತಿ ತಾಣಗಳನ್ನು ನಿವಾರಿಸಿ. ಮನೆ ಮತ್ತು ನೆರೆಹೊರೆಯಲ್ಲಿ ನೀರನ್ನು ಹಿಡಿದಿಟ್ಟುಕೊಳ್ಳುವ ಯಾವುದೇ ಪಾತ್ರೆಗಳು, ಬಕೆಟ್‌ಗಳು ಅಥವಾ ಇತರ ವಸ್ತುಗಳನ್ನು ತೆಗೆದುಹಾಕಿ. ನೀರಿನ ಶೇಖರಣೆಯನ್ನು ತಡೆಗಟ್ಟಲು ಮನೆಯ ಒಳಚರಂಡಿ ವ್ಯವಸ್ಥೆಯನ್ನು ನಿಯಮಿತವಾಗಿ ಸ್ವಚ್ಛಗೊಳಿಸಿ. ಸೊಳ್ಳೆ ನಿವಾರಕಗಳನ್ನು ಬಳಸಿ. ಸೊಳ್ಳೆಗಳು ಒಳಬರುವುದನ್ನು ತಡೆಯಲು ಮನೆಯ ಕಿಟಕಿಗಳು ಮತ್ತು ಬಾಗಿಲುಗಳನ್ನು ಚೆನ್ನಾಗಿ ಸ್ಕ್ರೀನಿಂಗ್ ಮಾಡಲಾಗಿದೆ ಎಂದು ಖಚಿತಪಡಿಸಿಕೊಳ್ಳಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಘವೇಂದ್ರ ಸಾವಂತ, ಎಂ.ಬಿ.ತೇಲಿ, ಎಸ್.ಜಿ.ವಾಲಿಕಾರ, ಪಿ.ವಾಯ್. ಕುರಿ, ಬಿ.ಎ.ಮೇತ್ರಿ, ಪ್ರಕಾಶ ಅಂಬಿಗೇರ, ಪ್ರಶಾಂತ ಸಾಳುಂಕೆ, ಎನ್.ಬಿ.ಬಡಿಗೇರ, ಮಲ್ಲು ಕರ್ಜಗಿ, ಆರ್.ಡಿ.ಕುಲಕರ್ಣಿ, ಚೇತನ ಆಳೂರ ಸೇರಿದಂತೆ ಆರೋಗ್ಯ ಇಲಾಖೆಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಗ್ರಾಮಸ್ಥರು ಉಪಸ್ಥಿತರಿದ್ದರು.

# ಮೇ.18ರಂದು ಕಾವ್ಯಕನ್ನಿಕೆ ಕೃತಿ ಲೋಕಾರ್ಪಣೆ

**ಉದಯರಶ್ಮಿ ನ್ಯೂಸ್**

ಚಡಚಣ: ಪಟ್ಟಣದ ಮಹಾದೇವ ಮಠದಲ್ಲಿ ಇದೆ ರವಿವಾರದಂದು ಬಸವ ಸಂಗಮ ಪ್ರಕಾಶನದಿಂದ ಚಡಚಣ ಮಹಿಳಾ ಸಾಹಿತಿ ಹಾಗೂ ಪತ್ರಕರ್ತೆಯಾದ ವಿದ್ಯಾ ಕಲ್ಯಾಣಶೆಟ್ಟಿ ಅವರ ಕಾವ್ಯಕನ್ನಿಕೆ ಗ್ರಂಥ ಲೋಕಾರ್ಪಣೆಗೊಳ್ಳಲಿದೆ.

ಈ ಕಾರ್ಯಕ್ರಮಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತನ ಅಧ್ಯಕ್ಷ ಹಾಸಿಂಪೀರ ವಾಲೀಕಾರ ಪುಸ್ತಕ ಬಿಡುಗಡೆ ಮಾಡಲಿದ್ದು, ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಸಿದ್ದೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಬಿ ಎಂ ಕೋರೆ ಅವರು ಮಾಡಲಿದ್ದಾರೆ.

ಶ್ರೀದೇವಿ ಅಕ್ಕನವರು ಜ್ಯೋತಿ ಬೆಳಗಿಸಲಿದ್ದು, ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಜಂಬುನಾಥ ಕಂಚ್ಯಾಣಿ. ಪುಸ್ತಕ ಪರಿಚಯವನ್ನು ಡಾ ಎಂ ಎಸ್ ಮಾಗಣಗೇರಿ ಮಾಡಲಿದ್ದಾರೆ, ಸಾನಿಧ್ಯ ಚಡಚಣ ವಿರಕ್ತಮಠದ ಪೂಜ್ಯರಾದ ಷಡಕ್ಷರಿ ಸ್ವಾಮಿಗಳು ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಡಾ ಸಂಗಮೇಶ ಮೇತ್ರಿ, ಪ್ರೊ ಆರ್ ಪಿ ಬಗಲಿ, ಪ್ರೊ ಎಸ್ ಕೆ ಕುಲಕರ್ಣಿ, ಭೀಮುಗೌಡ ಬಿರಾದಾರ, ಶಂಕರ ಹಾವಿನಾಳ, ರಮೇಶ ಬಿರಾದಾರ ಸೇರಿದಂತೆ ಮುಂತಾದವರು ಭಾಗವಹಿಸಲಿದ್ದಾರೆ



ಎಂದು ಬಸವ ಸಂಗಮ ಪ್ರಕಾಶನದ ಅಧ್ಯಕ್ಷ ಸಂತೋಷ ಕಲ್ಯಾಣಶೆಟ್ಟಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹುಬ್ಬಳ್ಳಿಯ ಅಂಜಲಿ ಅಂಬಿಗೇರ ಹತ್ಯೆಗೆ ಡಿವೈಎಫ್‌ಐ ಖಂಡನೆ

**ಉದಯರಶ್ಮಿ ನ್ಯೂಸ್**

ಸಿಂದಗಿ: ಹುಬ್ಬಳ್ಳಿಯ ಅಂಜಲಿ ಅಂಬಿಗೇರಳನ್ನು ಪ್ರೀತಿ ನಿರಾಕರಣೆಯ ನೆಪದಲ್ಲಿ ಹಂತಕ ಗಿರೀಶ ಸಾವಂತ ಚಾಕುವಿನಿಂದ ಇರಿದು ಕೊಲೆಗೈದಿರುವ ಹೇಯ ಕೃತ್ಯವನ್ನು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈ–ಎಫ್‌ಐ) ರಾಜ್ಯ ಸಮಿತಿಯು ಖಂಡಿಸುತ್ತದೆ. ಹಾಗೂ ಹತ್ಯೆ ಗೈದ ಆರೋಪಿ ಗಿರೀಶ ಸಾವಂತನನ್ನು ಕೂಡಲೇ ಬಂಧಿಸಿ, ಕಠಿಣ ಶಿಕ್ಷೆ ವಿಧಿಸಬೇಕು ಎಂದು ಕರ್ನಾಟಕ ರಾಜ್ಯ ಸಮಿತಿ ಸದಸ್ಯ ರಮೇಶ ಸಾಸಾಬಾಳ ಆಗ್ರಹಿಸಿದ್ದಾರೆ.

ಕೆಟರಿಂಗ್ ನಲ್ಲಿ ಕೆಲಸ ಮಾಡುತ್ತಿದ್ದ ಯುವತಿ ಅಂಜಲಿಗೆ ಪ್ರೀತಿಸುವಂತೆ ಗಿರೀಶ ಪೀಡಿಸುತ್ತಿದ್ದು, ಆಕೆ ಪ್ರೀತಿಯನ್ನು ನಿರಾಕ–ರಿಸಿದ್ದಾಳೆಂದು ಬೆಳಗಿನ ಜಾವ ಅವಳ ಮನೆಗೆ ನುಗ್ಗಿ ಹತ್ಯೆಗೈದಿದ್ದಾನೆ. ಹುಬ್ಬಳ್ಳಿಯ ವಿದ್ಯಾರ್ಥಿನಿ ನೇಹಾಳ ಕೊಲೆ ಮಾಸುವ ಮುನ್ನವೇ ಅದೇ ಭೂಮಿಯಲ್ಲಿ ಮತ್ತೊಬ್ಬ ಯುವತಿಯ ಹತ್ಯೆ ನಡೆದಿರುವುದು ಅಘಾತಕಾರಿ. ಇಂತಹ ಘಟನೆಗಳು ಯುವತಿಯರಿಗೆ ಹಾಗೂ ಮಹಿಳೆಯರಿಗೆ ಸೂಕ್ತ ರಕ್ಷಣೆ ಮರೀಚಿಕೆಯಾಗುತ್ತಿದೆ ಎಂಬುದನ್ನು ತೆರೆದಿಟ್ಟಂತಿದೆ.



ರಾಜ್ಯದಲ್ಲಿ ದಿನನಿತ್ಯ ಹೆಣ್ಣು ಮಕ್ಕಳಿಂದ ಹಿಡಿದು ವಯೋವೃದ್ಧ ಮಹಿಳೆಯರವರೆಗೂ ಒಂದಿಲ್ಲೊಂದು ರೀತಿಯ ಹಿಂಸೆ, ದೌರ್ಜನ್ಯದಂತಹ ಘಟನೆಗಳು, ಹತ್ಯೆಗಳು ಅವ್ಯಾಹತವಾಗಿ, ಅನಿಯಂತ್ರಿತವಾಗಿ ನಡೆಯುತ್ತಿವೆ. ದೌರ್ಜನ್ಯ ಎಸಗುವವರಿಗೆ ಕಾನೂನಿನ ಭಯವೇ ಇಲ್ಲವೇನು ಎಂಬಂತಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ನಿಯಂತ್ರಿಸಲು ಸರಕಾರ ಇನ್ನಷ್ಟು ಕಠಿಣ ಕ್ರಮ ಕೈಗೊಳ್ಳಬೇಕು. ಹಾಗೂ ಈ ಹಿಂಸೆ ದೌರ್ಜನ್ಯಗಳನ್ನು ತಡೆಗಟ್ಟಲು ರಾಜ್ಯದಲ್ಲಿ ಉಗ್ರಪ್ಪ ಸಮಿತಿ ನೀಡಿರುವ ವರದಿಯನ್ನು ಸಮರ್ಪಕವಾಗಿ ಜಾರಿಗೆ ತರಲು ಅಗತ್ಯ ಕ್ರಮ ಕೈಗೊಳ್ಳಬೇಕು.

ಕೊಲೆಗೈದ ಹಂತಕ ಗಿರೀಶನನ್ನು ಕೂಡಲೇ ಬಂಧಿಸಿ, ಕಠಿಣ ಶಿಕ್ಷೆ ಕೊಡಬೇಕು. ಕೊಲೆಯಾಗಿರುವ ಅಂಜಲಿಯ ಕುಟುಂಬಕ್ಕೆ ನ್ಯಾಯ ಒದಗಿಸಬೇಕು. ಇಂತಹ ಪ್ರಕರಣಗಳನ್ನು ದೀರ್ಘಕಾಲ ನಡೆಸದೇ ಶೀಘ್ರವಾಗಿ ಇತ್ಯಥ–'ಪಡಬೇಕು. ಈ ಕೇಸಗಳನ್ನು ತ್ವರಿತ ನ್ಯಾಯಾಲಯಕ್ಕೆ ನೀಡಬೇಕು. ಈ ಮೂಲಕ ದುರುಳರಿಗೆ ಶಿಕ್ಷೆಯನ್ನು ಮತ್ತು ಸಂತ್ರಸ್ತ ಕಟುಂಬಗಳಿಗೆ ನ್ಯಾಯ ಒದಗಿಸಬೇಕು. ಸರಕಾರ ಹೆಚ್ಚಿನ ಸಂಖ್ಯೆಯಲ್ಲಿ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಬೇಕು ಎಂದು ಡಿವೈಎ[illegible] ರಾಜ್ಯ ಸಮಿತಿಯು ಒತ್ತಾಯಿಸುತ್ತದೆ ಎಂದಿದ್ದಾರೆ.

# ಪ್ರತಿಭೆ ಪರಿಚಯಿಸುವುದೇ ಶಿಕ್ಷಣದ ಗುರಿ :ಶಾಸಕ ಸಿದ್ದು ಸವದಿ

**ಉದಯರಶ್ಮಿ ನ್ಯೂಸ್**

ಚಿಮ್ಮಡ: ಮಕ್ಕಳಲ್ಲಿ ಅಡಗಿರುವ ಸೂಪ್ತ ಪ್ರತಿಭೆಯನ್ನು ಜಗತ್ತಿಗೆ ಪರಿಚಯಿಸುವ ವೈಜ್ಞಾನಿಕ ಶಿಕ್ಷಣ ನೀಡುವ ಕಾರ್ಯ ಶಿಕ್ಷಣ ಸಂಸ್ಥೆಗಳಿಂದಾಗಬೇಕು ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಗ್ರಾಮದ ಶ್ರೀ ಪ್ರಭುಲಿಂಗೇಶ್ವರ ಇಂಟರನ್ಯಾಷನಲ್ ಆಂಗ್ಲ ಮಾದ್ಯಮ ಶಾಲೆಯಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ ಬೇಸಿಗೆ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅಥಿ–ತಿಗಳಾಗಿ ಆಗಮಿಸಿ ಮಾತನಾಡಿದ ಅವರು ಗುಣಮಟ್ಟದ ಶಿಕ್ಷಣ ಗ್ರಾಮೀಣ ಭಾಗದಲ್ಲಿ ನೀಡುವ ಉದ್ದೇಶದಿಂದಲೇ ಈ ಶಿಕ್ಷಣ ಸಂಸ್ಥೆ ಪ್ರಾರಂಭಿಸಲಾಗಿದ್ದು ನಮ್ಮ ಮಕ್ಕಳು ಶಿಕ್ಷಣಕ್ಕಾಗಿ ಮಂಗಳೂರು, ಬೆಂಗಳೂರು ಅಲೆಯುವ ಬದಲಾಗಿ ಅಲ್ಲಿನ ವಿದ್ಯಾರ್ಥಿಗಳೇ ಅತೀ ಕಡಿಮೆ ವ್ಯಚ್ಯದಲ್ಲಿ ನಮ್ಮ ಭಾಗಕ್ಕೆ ಬಂದು ಕಲಿಯುವಂತಹ ಶೈಕ್ಷಣಿಕ ವಾತಾವರಣ ಈ ಸಂಸ್ಥೆ ಸೃಷ್ಟಿಸಲಿದೆ ಎಂದರು.

ಸಂಸ್ಥೆಯ ಪ್ರಾಚಾರ್ಯ ಫಿಲಿಪ್ ಥಾಮಸ್ ಮಾತನಾಡಿ ಪ್ರತಿಯೊಬ್ಬ ಪಾಲಕರು ತಾವು ಎಷ್ಟೆ ತೊಂದರೆಯಲ್ಲಿದ್ದರು ತಮ್ಮ ಮಕ್ಕಳ ಶಿಕ್ಷಣ, ಭವಿಷ್ಯದ ಕುರಿತು ಯಾವುದೇ ರಾಜಿ ಮಾಡಿಕೊಳ್ಳದೆ ಶಿಕ್ಷಣ ನೀಡುತ್ತಿರುವುದು ಒಳ್ಳೆಯ ಬೆಳವಣಿಗೆ ಯಾಗಿದ್ದು ಅವರ ನಿರೀಕ್ಷೆಗೆ ತಕ್ಕ ಮೌಲ್ಯಯುತ ಶಿಕ್ಷಣ ನೀಡುವ ಧೇಯ ನಮ್ಮ ಸಂಸ್ಥೆ ಹೊಂದಿದೆ ಎಂದರು.

ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ವಿದ್ಯಾಧರ ಸವದಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಹಿಪ್ಪೋ ಕ್ಯಾಂಪಸ್ ನಿರ್ದೇಶಕ



ರಾಹುಲ್ ಉಟ್ಟೂರೆ, ಪ್ರಗತಿಪರ ರೈತ ದಾನಪ್ಪ ಆಸಂಗಿ, ರಾಜು ಬಗನಾಳ ಮಾತನಾಡಿದರು. ಸಮಾರಂಭದ ಸಾನಿಧ್ಯವನ್ನು ಸಾಧು ಮಹಾರಾಜರ ಮಠದ ಶ್ರೀ ಜನಾರ್ಧನ ಮಹಾರಾಜರು ವಹಿಸಿದ್ದರು.

ಜಿ.ಪಂ. ಮಾಜಿ ಸದಸ್ಯ ಬಾಬಾಗೌಡ ಪಾಟೀಲ, ಪುಂಡಲಿಕಪ್ಪಾ ಪೂಜಾರಿ, ಪಿಕೆಪಿಎಸ್ ಅಧ್ಯಕ್ಷ ಶಂಕರ ಬಟಕುರ್ಕಿ, ಆನಂದ ಕಂಪು, ಗ್ರಾ.ಪಂ. ಮಾಜಿ ಅಧ್ಯಕ್ಷ ಗುರಲಿಂಗಪ್ಪಾ ಪೂಜಾರಿ, ಆನಂದ ಕವಟಿ, ಪ್ರಭು ನೇಸೂರ, ಬೀರಪ್ಪಾ ಹಳೆಮನಿ, ಸತ್ಯಪ್ಪಾ ನೇಸೂರ, ರಾಚಯ್ಯ ಮಠಪತಿ ಸೇರಿದಂತೆ ಹಲವಾರು ಜನ ಪ್ರಮುಖರು ವೇದಿಕೆಯಲ್ಲಿದ್ದರು.

# ನಿವರಗಿ ಗ್ರಾಮದ ಶ್ರೇಯಾ ಮುರಗುಂಡೆಗೆ ಶೇ.94.06 ಅಂಕ

**ಉದಯರಶ್ಮಿ ನ್ಯೂಸ್**



ಚಡಚಣ: ತಾಲೂಕಿನ ನಿವರಗಿ ಗ್ರಾಮದ ಶ್ರೇಯಾ ಮಹೇಶ ಮುರಗುಂಡೆ 10ನೇ ತರಗತಿ ಸಿಬಿಎಸ್‌ಇ ಪರೀಕ್ಷೆಯಲ್ಲಿ ಶೇ 94.6 ಅಂಕ ಪಡೆದುಕೊಂಡು ವಿಜಯಪುರದ ರೂಪಾದೇವಿ ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.

ಇವರ ಈ ಸಾಧನೆಗೆ ಪೋಷಕರು ಮತ್ತು ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.

# ಸರ್ಕಾರಿ ಉರ್ದು ಶಾಲೆ ವಿದ್ಯಾರ್ಥಿನೀಯರ ಉತ್ತಮ ಸಾಧನೆ

**ಉದಯರಶ್ಮಿ ನ್ಯೂಸ್**


ದೇವರಹಿಪ್ಪರಗಿ: ಪಟ್ಟಣದ ಸರ್ಕಾರಿ ಉರ್ದು ಪ್ರೌಢಶಾಲೆಯ ವಿದ್ಯಾರ್ಥಿನೀಯರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿ ಶಾಲೆಗೆ ಕೀರ್ತಿ ತಂದಿದ್ದಾರೆ.



ಶಾಲೆಯ ವಿದ್ಯಾರ್ಥಿನೀಯರಲ್ಲಿ ಸದಾಫ್ನಜ್ ಚೌಧರಿ ಪ್ರಥಮ ಭಾಷೆ ಉರ್ದುವಿನಲ್ಲಿ 125ಕ್ಕೆ 125 ಅಂಕ ಪಡೆದು ಶೇ 92.48 ಫಲಿತಾಂಶದೊಂದಿಗೆ ಪ್ರಥಮ ಸ್ಥಾನ ಪಡೆದರೆ, ಅಲ್ಫಿಯಾ ಬಾಗಬಾನ ಶೇ 87.84, ಸಮ್ರೀನ್ ಮಂಡೆ ಶೇ 85.92 ಅಂಕ ಪಡೆದಿದ್ದಾರೆ. ವಿದ್ಯಾರ್ಥಿನೀಯರ ಈ ಸಾಧನೆಗೆ ಉರ್ದು ಭಾಷೆ ಶಿಕ್ಷಕ ಯಾಸೀನ್ ಗರಡಿಮನಿ ಸೇರಿದಂತೆ ಶಿಕ್ಷಕ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಸೃಜಲಾಗಾಂಧಿ ರಾಜಮನಿ ಶಾಲೆಗೆ ಪ್ರಥಮ

**ಉದಯರಶ್ಮಿ ನ್ಯೂಸ್**



ಇಂಡಿ: ಎಸ್–ಎಸ್ ಲ್‌ಸಿ ಪರೀಕ್ಷೆಯಲ್ಲಿ ಪಟ್ಟಣದ ಕರ್ನಾಟಕ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ವಿಧ್ಯಾರ್ಥಿನಿಯರಾದ ಕುಮಾರಿ ಸೃಜಲಾಗಾಂಧಿ ಶ್ರೀಶೈಲ ರಾಜಮನಿ 625 ಕ್ಕೆ 586 ಶೇ. (93.76) ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದರೆ, ಸುಪ್ರಜಲ್‌ಗಾಂದಿ ಶ್ರೀಶೈಲ ರಾಜಮನಿ 625ಕ್ಕೆ 560ಅಂಕಗಳನ್ನು ಪಡೆದು ಶೇ. (89.06) ಶಾಲೆಗೆ ತೃತೀಯ ಸ್ಥಾನ ಪಡೆದಿದ್ದಾರೆ.

ವಿಧ್ಯಾರ್ಥಿನಿಯರ ಸಾಧನೆಗೆ ಶಾಲೆಯ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

# ಡಿಪ್ಲೋಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಉದಯರಶ್ಮಿ ನ್ಯೂಸ್**

ವಿಜಯಪುರ: ಎಸ್‌ಎಸ್–ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆ ಪಾಸಾದ ವಿದ್ಯಾರ್ಥಿಗಳಿಗೆ 2024–25ನೇ ಸಾಲಿನ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಕ್ಕಾಗಿ ವಿಜಯಪುರ ಸರಕಾರಿ ಪಾಲಿಟೆಕ್ನಿಕ್ ಕಾಲೇಜು ದ್ವಿತೀಯ ಹಂತದ ಆಫ್ ಲೈನ್ ಮುಖಾಂತರ ಅರ್ಜಿ ಆಹ್ವಾನಿಸಿದೆ.

ಅರ್ಜಿ ಸಲ್ಲಿಸಲು ಮೇ 20 ಕೊನೆಯ ದಿನವಾಗಿದೆ ಅರ್ಹ ಅಭ್ಯರ್ಥಿಗಳ ಮೆರಿಟ್ ಪಟ್ಟಿಯನ್ನು ವಿಜಯಪುರ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನ ಸೂಚನಾ ಫಲಕದಲ್ಲಿ ಮೇ 21 ರಂದು ಬೆಳಿಗ್ಗೆ 10:30ರ ನಂತರ ಪ್ರಕಟಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ dte-tech.karnataka,gov.in/kartechnical CxÀªÁ dtek.karnataka.gov.in ವೆಬ್ ಸೈಟ್ ಅನ್ನು ಸಂಪರ್ಕಿಸಬಹುದಾಗಿದೆ ಎಂದು ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅರುಣ ಝುಳಕಿ ಶಾಲೆಗೆ ಪ್ರಥಮ

**ಉದಯರಶ್ಮಿ ನ್ಯೂಸ್**

ಇಂಡಿ: 2023–24 ನೇ ಸಾಲಿನ ಸಿ.ಬಿ.ಎಸ್.ಸಿ 10ನೇ ತರಗತಿ ಫಲಿತಾಂಶ ಪ್ರಕಟಗೊಂಡಿದ್ದು, ಜವಾಹರ್ ನವೋದಯ ವಿದ್ಯಾಲಯ ಕಲಬುರ್ಗಿ 01 (ತಾಡತೇಗನೂರ) ಶಾಲೆಯ ವಿದ್ಯಾರ್ಥಿಯಾದ ಇಂಡಿ ನಗರದ ಅರುಣ ಲಕ್ಷ್ಮಣ ಝುಳಕಿ 661(94.43%) ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾನೆ.




ವಿದ್ಯಾರ್ಥಿಯ ಸಾಧನೆಗೆ ಪ್ರಾಚಾರ್ಯರು, ಸಿಬ್ಬಂದಿ ವರ್ಗ, ಪಾಲಕರು ಸಂತಸ ವ್ಯಕ್ತಪಡಿಸಿ ಶುಭ ಹಾರೈಸಿದ್ದಾರೆ.

# ಐಡಿಎಲ್ ಪ್ರೌಢ ಶಾಲಾ ವಿದ್ಯಾರ್ಥಿಗಳ ಉತ್ತಮ ಸಾಧನೆ

**ಉದಯರಶ್ಮಿ ನ್ಯೂಸ್**

ಮೋರಟಗಿ: 2024ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಗ್ರಾಮದ ಐಡಿ–ಎಲ್ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಲ್ಲಿ 15 ವಿದ್ಯಾರ್ಥಿಗಳಲ್ಲಿ 14 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅತ್ಯುತ್ತಮ ಶ್ರೇಣಿ 2 ಪ್ರಥಮ ಶ್ರೇಣಿ 12 ವಿದ್ಯಾರ್ಥಿಗಳು ಪಾಸಾಗಿದ್ದು ಶಾಲಾ ಫಲಿತಾಂಶ ಶೇ 93.30% ರಷ್ಟಾಗಿದೆ.



1) ಬಸವರಾಜ ದಂಡಿನ 553(88.48%) 2) ಮಾಯಿನಕುಬ್ರ ಮುಲ್ಲಾ, 548(87.68%)

3) ಕಾರ್ತಿಕ್ ಬಳಗುಂಪಿ 530(84.80%)

4) ಹುಸೇನ್ ಮುಳ್ಳೋಳ್ಳಿ 518(82.88)

5)ಅಂಜುಮ ಬಾಗವಾನ 508(81.28) ಅಂಕಗಳನ್ನು ಪಡೆದು ಐಡಿಎಲ್ ಶಾಲೆಯ ಕೀರ್ತಿ ಹೆಚ್ಚಿಸಿದ್ದಾರೆ.

ಉತ್ತಮ ಸಾದನೆ ಮಾಡಿ ಶಾಲೆಯ ಕೀರ್ತಿ ಹೆಚ್ಚಿಸಿದ ಎಲ್ಲ ವಿದ್ಯಾರ್ಥಿಗಳಿಗೆ ಶಾಲೆಯ ಸಂಸ್ಥಾಪಕ ಅಧ್ಯಕ್ಷರು ಆಡಳಿತ ಮಂಡಳಿ ಶಿಕ್ಷಕ ವೃಂದ ಹಾಗೂ ಸಿಬ್ಬಂದಿಗಳು ಅಭಿನಂದನೆಗಳನ್ನು ಸಲ್ಲಿಸಿ ವಿದ್ಯಾರ್ಥಿಗಳ ಜೀವನ ಉನ್ನತ ಮಟ್ಟಕ್ಕೆ ಬೆಳೆಯಲಿ ಎಂದು ಹಾರೈಸಿದ್ದಾರೆ.

# ಮೇ.17 ರಂದು ವಿದ್ಯುತ್ ವ್ಯತ್ಯಯ

**ಉದಯರಶ್ಮಿ ನ್ಯೂಸ್**



ವಿಜಯಪುರ: ಹಲ್ಲೂರು (ಜೆಟ್ಟಗಿ) ವಿದ್ಯುತ್ ಉಪ ಕೇಂದ್ರದಲ್ಲಿ ಹೊಸದಾಗಿ ನಿರ್ಮಿಸಲಾಗುತ್ತಿರುವ 110 ಕೆವಿ ಬಸವನ ಬಾಗೇವಾಡಿ – ಮುದ್ದೇಬಿಹಾಳ ಮಾರ್ಗದ ಗೋಪೂರ ಅಳವಡಿಸುವ ಹಾಗೂ ವಿದ್ಯುತ್ ಎಳೆಯುವ ಕಾಮಗಾರಿ ಸಲುವಾಗಿ ಮೇ. 17 ರಂದು ಬೆಳಗ್ಗೆ ಎಂಟು ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೆ 110 ಕೆವಿ ಉಪಕೇಂದ್ರ ಹಿರೇಮುರಾಳ, 100 ಕೆವಿ ಕೆ ಎನ್ ಸೋಲಾರ ಮುದ್ದೇಬಿಹಾಳ, 110 ಕೆವಿ ಕೋಳೂರು, 110 ಕೆವಿ ಬಾಲಾಜಿ ಶುಗರ್ಸ್, ಹಾಗೂ 110 ಕೆವಿ ಮುದ್ದೇಬಿಹಾಳ ಉಪ ಕೇಂದ್ರದಿಂದ ಹೊರಹೋಗುವ 33 ಕೆವಿ ಉಪ ಕೇಂದ್ರಗಳ ಮಾರ್ಗದಲ್ಲಿ (ಢವಳಗಿ, ತಂಗಡಗಿ, ನಾಲತವಾಡ) ಮಾರ್ಗಗಳಲ್ಲಿ ಹಾಗೂ ಎಲ್ಲಾ ಉಪ ಕೇಂದ್ರಗಳಿಂದ ಹೊರಹೊಮ್ಮುವ ಎಲ್ಲಾ 11 ಕೆವಿ ಮಾರ್ಗಗಳಿಗೆ ನಿರಂತರ ಜ್ಯೋತಿ ಮಾರ್ಗಗಳು, ನೀರು ಸರಬರಾಜು ಮಾರ್ಗಗಳು, ಕೃಷಿ ನೀರಾವರಿ ಮಾರ್ಗಗಳು ಹಾಗೂ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

ಆದ ಕಾರಣ ಗ್ರಾಹಕರು ಹಾಗೂ ಸಾರ್ವಜನಿಕರು ಸಹಕರಿಸಬೇಕು ಎಂದು ಬಸವನ ಬಾಗೇವಾಡಿ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಚರಂಡಿಯಲ್ಲಿ ನವಜಾತ ಶಿಶುವಿನ ಕಳೆಬರ ಪತ್ತೆ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಏನೂ ಅರಿಯದ ಕಂದಮ್ಮನನ್ನ ಚರಂಡಿಂ–ಯಲ್ಲಿ ಎಸೆದ ಹೃದಯ ವಿದ್ರಾವಕ ಘಟನೆ ತಾಲೂಕಿನ ಆಲಕೊಪ್ಪರ ಗ್ರಾಮದಲ್ಲಿ ಗುರುವಾರ ಬೆಳಿಗ್ಗೆ ಬೆಳಕಿಗೆ ಬಂದಿದೆ.

ಆಗ ತಾನೇ ಜನಿಸಿದ ಗಂಡು ಮಗುವನ್ನ ಕರುಳು ಬಳ್ಳಿಯ ಸಮೇತ ಪ್ಲಾಸ್ಟಿಕ್ ಕವರ್‌ನಲ್ಲಿ ಹಾಕಿ ಬಸ್ ನಿಲ್ದಾಣದ ಬಳಿ ಇರುವ ಮುಖ್ಯ ಚರಂಡಿಯಲ್ಲಿ ಎಸೆಯಲಾಗಿದೆ.

ಮಗುವನ್ನ ಕಂಡ ಸ್ಥಳೀಯರು ಸಲಿಕೆಯ ಸಹಾಯದಿಂದ ಆಚೆ ತೆಗೆದು ಪೊಲೀಸ್ ಠಾಣೆಗೆ ಮಾಹಿತಿ



ನೀಡಿದ್ದು, ಸ್ಥಳಕ್ಕಾಗಮಿಸಿದ ಪಿಎಸ್‌ಐ ಸಂಜೀವ ತಿಪರೆಡ್ಡಿ ಕಾನೂನು ಕ್ರಮ ಕೈಗೊಂಡಿದ್ದಾರೆ.

# ಬಂದ್ ಮಾಡಲಾದ ಬಸ್ ಸೇವೆ ಪುನರಾರಂಭಕ್ಕೆ ಆಗ್ರಹ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಸಕಾರಣವಿಲ್ಲದೇ ಬಂದ ಮಾಡಲಾದ ಬಸ್ ಸೇವೆಗಳನ್ನು ಪುನರ್ ಆರಂಭಿಸಬೇಕು ಎಂದು ಆಗ್ರಹಿಸಿ ಪಟ್ಟಣದ ಮರ್ಚೆಂಟ್ ಅಸೋಸಿಯೇಶನ್, ನಗರಾಭಿವೃದ್ಧಿ ಹೋರಾಟ ವೇದಿಕೆ ಸೇ–ರಿದಂತೆ ವಿವಿದ ಪ್ರಗತಿಪರ ಸಂಘಟನೆಗಳು ಮೇ.17 ರಂದು ಸಂಜೆ 4ಗಂಟೆಗೆ ಪಟ್ಟಣದ ಗ್ರಾಮದೇವತೆ ದೇವಸ್ಥಾನದಿಂದ ಪ್ರತಿಭಟನೆ ನಡೆಸುವ ಮೂಲಕ ಕೆಎಸ್‌ಆರ್‌ಟಿಸಿ ಘಟಕಾಧಿಕಾರಿಗಳಿಗೆ ಮನವಿ ಸಲ್ಲಿಸಲು ನಿರ್ಧರಿಸಿವೆ.

ಈ ಕುರಿತು ಮಾಹಿತಿ ನೀಡಿದ ಹೋರಾಟಗಾರ ಬಸವರಾಜ ನಂದಿಕೇಶ್ವರಮಠ, ಈ ಹಿಂದೆ ಆಲಮಟ್ಟಿ ರೇಲ್ವೆ ಸ್ಟೇಷನ್, ಮುಂಬೈ, ನಾಸಿಕ, ರತ್ನಾಗಿರಿ, ವಾಸ್ಕೋ, ಪುಣೆ, ಹಾಸನ, ಕಾಗಿನೆಲೆ ಹೀಗೆ ಹಲವು ಬಸ್‌ಗಳನ್ನು ಮುದ್ದೇಬಿಹಾಳದಿಂದ ಓಡಿಸಲಾಗಿತ್ತಿತ್ತು. ಆದರೆ ದಿಢೀರನೆ ಈ ಬಸ್ಸುಗಳ ಓಡಾಟವನ್ನು ಬಂದ್ ಮಾಡಿದ್ದು ಸಾರ್ವಜನಿಕರು ಪರದಾಡುವಂತಾಗಿದೆ. ಕಾರಣ ಈ ಎಲ್ಲ ಬಸ್‌ಗಳು ಸೇರಿದಂತೆ ಎಲ್ಲ ಬಂದ್ ಮಾಡಲಾದ ಬಸ್‌ಗಳನ್ನು ಪುನರ್ ಆರಂಭಿಸುವಂತೆ ಒತ್ತಾಯಿಸಿ ಮನವಿ ಸಲ್ಲಿಸಲಾಗುತ್ತಿದೆ. ಎಲ್ಲರೂ ಭಾಗಿಯಾಗುವಂತೆ ಮನವಿ ಮಾಡಿಕೊಂಡಿದ್ದಾರೆ.



# ಅಂತರಾಷ್ಟ್ರೀಯ ದಾದಿಯರ ದಿನಾಚರಣೆ




**ಉದಯರಶ್ಮಿ ನ್ಯೂಸ್**

ವಿಜಯಪುರ: ವೈದ್ಯಕೀಯ ಕ್ಷೇತ್ರದಲ್ಲಿ ಮಾನವೀಯ ಮೌಲ್ಯ ಸೇವಾ ಮನೋಭಾವವನ್ನು ಗುರುತಿಸುವ ಹಾಗೂ ಗೌರವಿಸುವ ಫ್ಲೋರೆನ್ಸ್ ನೈಟಿಂಗ್ ಗೇಲ್ ಅವರ ಜನ್ಮದಿನಾಚರಣೆಯನ್ನು ವಿಶ್ವದ್ಯಂತ ದಾದಿಯರ ದಿನಾಚರಣೆಯಾಗಿ ಆಚರಣೆ ಮಾಡಲಾಗುತ್ತದೆ ಎಂದು ಐ ಎಂ ಎ ರಾಜ್ಯ ಶಾಖೆಯ ಏಎಂಎಸ್ ದ ಕಾರ್ಯದರ್ಶಿ ಡಾ. ಸುರೇಶ ಕಾಗಲ್ಕರ್ ಹೇಳಿದರು.

ನಗರದ ಕಿಡ್ನಿ ಕೇರ್ ಆಸ್ಪತ್ರೆಯಲ್ಲಿ ಇತ್ತೀಚಿಗೆ ಅಂತರಾಷ್ಟ್ರೀಯ ದಾದಿಯರ ದಿನಾಚರಣೆಯನ್ನು ಕೇಕ್ ಕತ್ತರಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕೋವಿಡ್ ಸಮಯದಲ್ಲಿ ಯೋಧರಂತೆ ಜೀವನವನ್ನೇ ಮುಡುಪಾಗಿಟ್ಟು ರೋಗಿಯನ್ನು ರಕ್ಷಿಸುವ ಕಾಯಕದಲ್ಲಿ ಹಗಲು ರಾತ್ರಿ ಎನ್ನದೆ ದುಡಿದಿದ್ದಾರೆ. ದಾದಿಯರು ನಗುಮುಖದಿಂದ ಶಿವ ನಿರ್ವಹಣೆಯನ್ನು ಮಾಡುವರು, ನೋವಿನಲ್ಲಿ ಧೈರ್ಯ ತುಂಬುವುದು ಕಷ್ಟದಲ್ಲಿ ಸಹಾಯ ಮಾಡುವ ಏಕೈಕ ಗುಣ ಇರುವುದು ಅದು ದಾದಿಯರ ಕರ್ತವ್ಯದಲ್ಲಿ ಇರುತ್ತದೆ ಅವರು ತಾಯಿಯ ರೂಪದಲ್ಲಿ ಅಕ್ಕ ತಂಗಿಯರ ರೂಪದಲ್ಲಿ ನಾವು ಕಾಣಬಹುದಾಗಿದೆ ಅವರ ಸೇವೆಗೆ ಬೆಲೆ ಕಟ್ಟಲಾಗದು ಎಂದು ಹೇಳಿದರು

ಸಮಾರಂಭದಲ್ಲಿ ವಿಜಯ್ ಬಡಿಗೇರ, ಬಸ್ಸು ಶಾಸ್ತ್ರಿ, ವಿಜಯ್, ಶಬನಾ, ಸಂತೋಷ್, ಪವಿತ್ರ, ಮುಜಬ್ ಮುಂತಾದವರು ಭಾಗವಹಿಸಿದ್ದರು ಕಾರ್ಯಕ್ರಮವನ್ನು ಸಾಗರ್ ನಿರ್ವಹಿಸಿ ವಂದನಾರ್ಪಣೆ ಮಾಡಿದರು.

# ಜಂತುಹುಳು ಸಮಸ್ಯೆ ಬಗ್ಗೆ ನಿರ್ಲಕ್ಷಿಸದಿರಿ :ಬಂಡಗರ

**ಉದಯರಶ್ಮಿ ನ್ಯೂಸ್**

ಚಡಚಣ: ರಕ್ತಹೀನತೆ ಮತ್ತು ಅಪೌಷ್ಠಿಕ ಕಾರಣದಿಂದ ಬಳಲಿದಂತೆ ಕಾಣುವ ಮಕ್ಕಳಲ್ಲಿ ಜಂತು ಹುಳು ಸಾಧ್ಯತೆ ಇರುತ್ತದೆ. ಈ ಸಮಸ್ಯೆ ಇದ್ದವರಿಗೆ ಸೇವಿಸುವ ಆಹಾರದ ಶೇ.30ರಿಂದ 40ರಷ್ಟು ಭಾಗ ಜಂತು ಹುಳುಗಳ ಪಾಲಾಗುತ್ತದೆ. ಹೀಗಾಗಿ ರಕ್ತಹೀನತೆ, ದೇಹದ ತೂಕ ಹಾಗೂ ನೆನಪಿನ ಶಕ್ತಿ ಕಡಿಮೆಯಾಗುವುದರ ಜತೆಗೆ ನಾನಾ ಸಮಸ್ಯೆಗಳು ಕಾಡುತ್ತವೆ. ಹೀಗಾಗಿ ಮಾತ್ರೆಗಳ ವಿತರಣೆ ಅಗತ್ಯವಿದೆ. ಮಕ್ಕಳಲ್ಲಿ ಕಂಡು ಬರುವ ಜಂತುಹುಳು ಸಮಸ್ಯೆ ಬಗ್ಗೆ ನಿರ್ಲಕ್ಷಿಸದಿರಿ...! ಎಂದು ರೇವತಗಾಂವ ಸಮುದಾಯ ಆರೋಗ್ಯಾಧಿಕಾರಿ ಶ್ರೀಧರ ಬಂಡಗರರವರು ಹೇಳಿದರು.

ರೇವತಗಾಂವ ಗ್ರಾಮದ ಶ್ರೀ ರೇವಣಸಿದ್ದೇಶ್ವರ ಕೋಚಿಂಗ್ ಕ್ಲಾಸ್‌ನಲ್ಲಿ ಬುಧವಾರದಂದು 'ರಾಷ್ಟ್ರೀಯ ಜಂತುಹುಳು ನಿರ್ಮೂಲನಾ' ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಜಂತುಹುಳು ಮಾತ್ರೆಗಳನ್ನು ವಿತರಣೆ ಮಾಡಿ ಮಾತನಾಡಿದ ಅವರು. ಜಂತುಹುಳು ಎಂದರೆ ಮಾನವನ ಕರುಳಿನಿಂದ ಪೋಷಕಾಂಶಗಳನ್ನು ಹೀರಿಕೊಂಡು ಜೀವಿಸುವ ಪರಾವಲಂಬಿಗಳು. ಅಲ್ಲದೆ ಜಂತುಹುಳುವಿನ ಸೋಂಕಿನಿಂದಾಗಿ ಮಕ್ಕಳ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ತಿಳಿಸಿದರು.

ಈ ವೇಳೆಯಲ್ಲಿ ಕೋಚಿಂಗ್ ಕ್ಲಾಸ್‌ನ ಸಂಚಾಲಕರಾದ ಮಲ್ಲು ಮಾನೆಯವರು ಮಾತನಾಡುತ್ತ. ಮಕ್ಕಳಲ್ಲಿ ಜಂತು ಹುಳುಗಳ ಬಾಧೆಯಿಂದ ರಕ್ತ ಹೀನತೆ ಹಾಗೂ ಅವರ ಬೌದ್ಧಿಕ ಬೆಳವಣಿಗೆ ಕುಂಠಿತಗೊಳ್ಳಬಹುದು. ಅವರ ಬುದ್ದಿಶಕ್ತಿ ಕಡಿಮೆಯಾಗಬಹುದು. ಶಾಲಾ ಹಾಜರಾತಿ ಕಡಿಮೆಯಾಗಿ ಕ್ರಮೇಣ ಶಾಲೆಯಿಂದ ಹೊರಬೀಳುವ ಸಾಧ್ಯತೆ ಇದೆ. ರಾಜ್ಯಾದ್ಯಂತ 1 ರಿಂದ 2 ವರ್ಷದ ಮಕ್ಕಳಿಗೆ ಅರ್ಧ ಮಾತ್ರೆ ಹಾಗೂ 2 ರಿಂದ 19 ವರ್ಷದ ವರೆಗಿನ ಮಕ್ಕಳಿಗೆ ಒಂದೊಂದು ಮಾತ್ರೆಗಳನ್ನು



ಪ್ರತಿವರ್ಷ, ವರ್ಷಕ್ಕೆ ಎರಡು ಬಾರಿ ಜಂತು ಹುಳು ನಿರ್ಮೂಲನೆಯ ಅಲ್ಬೆಂಡಝೋಲ್ ಮಾತ್ರೆಗಳನ್ನು ನೀಡಿ, ಈ ಹೊಟ್ಟೆ ಹುಳುಗಳ ನಿರ್ಮೂಲನೆಗಾಗಿ ಸರ್ಕಾರವು ರಾಷ್ಟ್ರೀಯ ಜಂತು ಹುಳು ನಿವಾರಣಾ ದಿನವನ್ನು ಆಚ–'ರಿಸುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಆಶಾ ಕಾರ್ಯಕರ್ತೆಯರಾದ ಸುವರ್ಣ ಅಂಕಲಗಿ, ಶೋಭಾ ಪೂಜಾರಿ ಸೇರಿದಂತೆ ಕೋಚಿಂಗ್ ಕ್ಲಾಸ್‌ನ ಮಾರ್ಗದರ್ಶಕರಾದ ಎಸ್.ಎಂ.ಮಾಳಿ, ವಿ.ಆರ್.ದಶವಂತ, ಬೈಲಪ್ಪ ಹೇರೂರ, ಶಿವಾನಂದ ಅರಸಗೊಂಡ, ಪ್ರೀಯಂಕಾ ವಾಲಿಕಾರ, ದೀಪಾ ಹಾವಿನಾಳ, ಸಾವಿತ್ರಿ ದಾಭೆ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಕೋಲ್ಹಾಪುರದ ಕನ್ಹೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮಿಗಳ ಅಭಿಮತ

# ಜನರ ಆರೋಗ್ಯ ಸರಿ ಇರದ ದೇಶದಲ್ಲಿ ಆರ್ಥಿಕ ಬೆಳವಣಿಗೆ ಸಾಧ್ಯವಿಲ್ಲ



**ಉದಯರಶ್ಮಿ ನ್ಯೂಸ್**

ವಿಜಯಪುರ: ನಾವು ಆರೋಗ್ಯಕರ ಆಹಾರ ಸೇವಿಸುವದಕ್ಕಿಂತ ಹೆಚ್ಚಾಗಿ ಅನಾರೋಗ್ಯಕರ ಆಹಾರ ಪದ್ಧತಿಯಿಂದ ತಲಾ ಸರಸರಿ ರೂ.150 ಗಳನ್ನು ಪ್ರತಿ ನಿತ್ಯ ಔಷಧಿ ಸೇವನೆಗಾಗಿ ಖರ್ಚು ಮಾಡುತ್ತಿದ್ದೇವೆ ಎಂದು ಕೋಲ್ಹಾಪುರದ ಕನ್ಹೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮಿಗಳು ಹೇಳಿದರು.

ಬಬಲೇಶ್ವರ ತಾಲೂಕಿನ ಕಂಬಾಗಿಯಲ್ಲಿ ಮಧುರಾ ಆಯಿಲ್ ಇಂಡಸ್ಟ್ರೀ□□□ನಲ್ಲಿ ಕಟ್ಟಿಗೆ ಗಾಣದಿಂದ ಕುಸಬಿ, ಶೇಂಗಾ ಮತ್ತು ಕೊಬ್ಬರಿ ಎಣ್ಣೆ ಉತ್ಪಾದಿಸುವ ಘಟಕವನ್ನು ಆರಂಭಿಸಿ ಮಾತನಾಡಿದ ಅವರು, ಯಾವ ದೇಶದಲ್ಲಿ ಜನರ ಆರೋಗ್ಯ ಸರಿ ಇರುವುದಿಲ್ಲವೋ ಆ ದೇಶದ ಆರ್ಥಿಕ ಬೆಳವಣಿಗೆ ಸಾಧ್ಯವಿಲ್ಲ. ರಿಫಾಯಿನ್ಡ್ ಎಣ್ಣೆ ಬಳಸುವದರಿಂದ ಮಧುಮೇಹ, ಹೃದಯ ರೋಗ, ಕ್ಯಾನ್ಸರ್ ಕಾಯಿಲೆಗಳು ಹೆಚ್ಚಾಗಿದ್ದು, ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಪ್ಯಾರಲೈಸಿಸ್ ಕಾಯಿಲೆಗೆ ನಾವು ಬಳಸುತ್ತಿರುವ ಎಣ್ಣೆ ಕೂಡ ಕಾರಣ ಆಗಿದೆ ಎಂದರು.

ಒಂದು ಲೀಟರ್ ಶೇಂಗಾ ಎಣ್ಣೆ ತಯಾರಿಸಲು 3 ಕೆ.ಜಿ ಶೇಂಗಾ ಕಾಳುಗಳು ಬೇಕು. 3 ಕೆ.ಜಿ ಶೇಂಗಾ ಕಾಳುಗಳ ಬೆಲೆ ರೂ.330 ಆಗುತ್ತದೆ. ಹಾಗಿದ್ದರೆ ರೂ.110 ಗೆ ಶೇಂಗಾ ಎಣ್ಣೆ ಮಾರುಕಟ್ಟೆಯಲ್ಲಿ ಸಿಗಲು ಹೇಗೆ ಸಾಧ್ಯ? ಇದರಲ್ಲಿ ಮಿಕ್ಸಿಂಗ್ ಇದೆ. ನಾವು ಬಳಸುವ ಪ್ರತಿಯೊಂದು ಪದಾರ್ಥಗಳಲ್ಲಿಯೂ ಮಿಕ್ಸಿಂಗ್ ಇದೆ. ಐ□□□ಕ್ರೀಂ ತಯಾರಿಸಲು ದನದ ಕೊಬ್ಬನ್ನು ಬಳಸುತ್ತಾರೆ. ನಾವು ಬಾಯಿ ಚಪ್ಪರಿಸಿ ಸೇವಿಸುತ್ತೇವೆ. ತರಕಾರಿ ಮಾರುವವರು ಕೂಡ ತಾವು ಬೆಳೆದ ತರಕಾರಿಯನ್ನು ಸೇವಿಸುವುದಿಲ್ಲ. ಬದಲಿಗೆ ಮಾರಾಟ ಮಾಡುತ್ತಾರೆ. ಏಕೆಂದರೆ ಅದಕ್ಕೆ ಅಷ್ಟೊಂದು ರಾಸಾಯನಿಕ ಸಿಂಪಡಿಸಿರುತ್ತಾರೆ. ಆ ವಿಷವನ್ನು ನಾವು ಪ್ರತಿನಿತ್ಯ ತಿನ್ನುತ್ತೇವೆ. ಪ್ರತಿಯೊಬ್ಬರು ತಾವು ತಿನ್ನುವ ತರಕಾರಿಯನ್ನು ಮತ್ತು ಬಳಸುವ ಕಾಳು–ಕಡಿಗಳನ್ನು ತಾವೇ ಸ್ವತಃ ರಾಸಾಯನಿಕ ಮುಕ್ತವಾಗಿ ಬೆಳೆದುಕೊಳ್ಳಬೇಕು ಎಂದು ಶ್ರೀಗಳು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಡಾ. ಮಹಾಂತೇಶ ಬಿರಾದಾರ, 30 ವರ್ಷಗಳಿಂದಿಚೆಗೆ ಹೃದಯ ರೋಗಿಗಳ ಮತ್ತು ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಿದ್ದು, ಅದರ ತಕ್ಕಂತೆ ಆಸ್ಪತ್ರೆಗಳ ಸಂಖ್ಯೆ ಹೆಚ್ಚಾಗಿದೆ. ಸಕ್ಕರೆ ಕಾಯಿಲೆಯಿಂದ ಬಳಲುತ್ತಿರುವ ಸಂಖ್ಯೆ ಹೆಚ್ಚಾಗಿ ರಾಜ್ಯ ಮಧುಮೇಹಿಗಳ ರಾಜಧಾನಿ ಎನಿಸಿಕೊಂಡಿದೆ. ಇದಕ್ಕೆ ಆಹಾರ ಪದ್ಧತಿಯೇ ಕಾರಣವಾಗಿದೆ ಎಂದರು.

ಮಾಜಿ ಸಚಿವರಾದ ಎಸ್. ಆರ್.ಪಾಟೀಲ, ಅಪ್ಪು ಪಟ್ಟಣಶೆಟ್ಟಿ ಮಾಜಿ ಶಾಸಕ ಆನಂದ ನ್ಯಾಮಗೌಡ, ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಕುಮಾರ ದೇಸಾಯಿ, ಕೆ. ಎಚ್.ಮುಂಬಾರೆಡ್ಡಿ, ಸಂಗಮೇಶ ಬಬಲೇಶ್ವರ, ಶ್ರೀಶೈಲಗೌಡ ಪಾಟೀಲ ನಿಡೋಣಿ ಈ ಸಂದರ್ಭದಲ್ಲಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಎಸ್. ಎಸ್.ಎಲ್.ಸಿ ಹಾಗೂ ಪಿಯುಸಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಮಧುರಾ ಆಯಿಲ್ ಇಂ–ಡಸ್ಟ್ರೀಸ್ ಮಾಲೀಕ ಉಮೇಶ ಮಲ್ಲಣ್ಣನವರ ಸನ್ಮಾನಿಸಿದರು. ಮರೇಗುದ್ದಿ ನಿರುಪಾಧೀಶ ಮಹಾಸ್ವಾಮಿಗಳು, ಶಿರೋಳ ಶಂಕರಾರೂಢ ಮಹಾಸ್ವಾಮಿಗಳು, ಮಮದಾಪುರ ಅಭಿನವ ಮುರುಘೇಂದ್ರ ಮಹಾಸ್ವಾಮಿಗಳು, ಗುಣದಾಳ ಡಾ.ವಿವೇಕಾನಂದ ದೇವರು, ನಾವದಗಿ ಶ್ರೀಶೈಲ ಸ್ವಾಮಿಗಳು, ಕಂಬಾಗಿ ಚನ್ನಬಸಯ್ಯ ಹಿರೇಮಠ ವೇದಿಕೆಯಲ್ಲಿದ್ದರು. ಎಸ್.ಎಂ.ಸೊನ್ನದ ಸ್ವಾಗತಿಸಿದರು, ಸುಭಾಷಚಂದ್ರ ಕನ್ನೂರ ನಿರೂಪಿಸಿದರು.

# ಸಮಯದ ಮಹತ್ವ

**ಉದಯರಶ್ಮಿ ದಿನಪತ್ರಿಕೆ**



**– ಸಂತೋಷ್ ರಾವ್ ಪೆರ್ಮುಡ, ಪೆರ್ಮುಡ ಮನೆ, ಪಟ್ರಮೆ ಗ್ರಾಮ ಮತ್ತು ಅಂಚೆ ಬೆಳ್ತಂಗಡಿ ತಾಲೂಕು,**

ಕ್ರಾಂತಿಕಾರಿಗಳ ಸಾಲಿನಲ್ಲಿ ಚಾಪೆಕರ್ ಸಹೋದರರ ಹೆಸರು ಅಜರಾಮರವಾಗಿದೆ. ಈ ಮೂರು ಮಂದಿ ಚಾಪೆಕರ್ ಸಹೋದರರು ದೇಶಕ್ಕಾಗಿ ನಗುನಗುತ್ತಲೇ ನೇಣುಗಂಬಕ್ಕೆ ಏರಿದ್ದರು.

ಅದೊಂದು ದಿನ ದಾಮೋದರ ಚಾಪೆಕರ್ ಅವರನ್ನು ಸರವರಾ ಜೈಲಿನಲ್ಲಿ ನೇಣಿಗೇರಿಸಲು ಬ್ರಿಟೀಷರು ಕರೆದುಕೊಂಡು ಬಂದಿದ್ದರು. ದಾಮೋದರ ಚಾಪೆಕರರು ಮಾತ್ರ ಆ ದಿನ ನಗು ಮುಖದಿಂದ ಮತ್ತು ಆನಂದದಿಂದಿದ್ದರು. ಅವರ ಕೈಯಲ್ಲಿ ಭಗವದ್ಗೀತೆಯ ಪುಸ್ತಕವಿದ್ದು, ಅವರು ಭಗವದ್ಗೀತೆಯನ್ನು ಓದುತ್ತಲೇ ನೇಣಿನ ಶಿಕ್ಷೆಗಾಗಿ ಸಿದ್ಧರಾಗಿದ್ದರು. ನೇಣುಗಂಬಕ್ಕೆ ಏರುವ ಸಮಯವಾದರೂ ಬ್ರಿಟೀಷ್ ಅಧಿಕಾರಿಗಳು ಅವರನ್ನು ನೇಣು ಕಂಬಕ್ಕೆ ಕರೆದೊಯ್ಯಲು ಬರಲೇ ಇಲ್ಲ. ಚಾಪೇಕರರು ಜೈಲಿನ ಕೋಣೆಯಲ್ಲಿ ಬ್ರಿಟೀಷ್ ಜೈಲು ಅಧಿಕಾರಿಗಳ ಆಗಮನಕ್ಕಾಗಿ ಕಾಯುತ್ತಾ ಇದ್ದರು.

ಕೊನೆಗೂ ಐದು ನಿಮಿಷ ತಡವಾಗಿ ಜೈಲಧಿಕಾರಿಗಳು ದಾಮೋದರ ಬಳಿಗೆ ಬಂದರು. ಬ್ರಿಟೀಷ್ ಜೈಲು ಅಧಿಕಾರಿಗಳ ಈ ಬೇಜವಾಬ್ದಾರಿಯನ್ನು ನೋಡಿದಂತಹ ದಾಮೋದರ ಚಾಪೇಕರ್ ಕೋಪಗೊಂಡರು. ಅವರು ಅತ್ಯಂತ ಚಾಣಾಕ್ಷತನದಿಂದ ಬ್ರಿಟೀಷ್ ಜೈಲು ಅಧಿಕಾರಿಗಳಿಗೆ ಅವರ ತಪ್ಪನ್ನು ತೋರಿಸಿಕೊಟ್ಟರು. 'ನಾನು ಯಾವ ಸಮಾಜದಿಂದ ಬಂದಿದ್ದೇನೆಯೋ ಅಲ್ಲಿನ ಜನರೆಲ್ಲರೂ ಬ್ರಿಟೀಷರೆಂದರೆ ತುಂಬಾ ಕಟ್ಟುನಿಟ್ಟಾಗಿ ಸಮಯ ಪಾಲನೆಯನ್ನು ಮಾಡುತ್ತಾರೆ ಎಂದು ತಿಳಿದಿದ್ದಾರೆ. ಆದರೆ ಇಂದು ಆ ಮಾತು ಸುಳ್ಳು ಎಂದು ತಿಳಿಯಿತು' ಎಂದು ಬ್ರಿಟೀಷ್ ಜೈಲು ಅಧಿಕಾ–ರಿಗಳಿಗೆ ಹೇಳಿದರು.




ನೇಣಿನ ಕಂಬಕ್ಕೆ ಏರಲು ಸಿದ್ಧನಾಗಿ ನಿಂತಿದ್ದ ವ್ಯಕ್ತಿಯನ್ನೂ ಕಾಯುವಂತೆ ಮಾಡಿದ ಬ್ರಿಟೀಷ್ ಜೈಲಧಿಕಾರಿಗಳು ದಾಮೋದರ ಚಾಪೇಕರರ ಮುಂದೆ ನಾಚಿಕೆಯಿಂದ ತಲೆತಗ್ಗಿಸಿದರು.

ಸಮಯದ ಮಹತ್ವ ಕುರಿತು ತಜ್ಞರು ಈ ರೀತಿಯಾಗಿ ಹೇಳುತ್ತಾರೆ, ಒಂದು ವರ್ಷದ ಮಹತ್ವವನ್ನು ತಿಳಿಯಲು ಪರೀಕ್ಷೆಯಲ್ಲಿ ಅನುತ್ತೀರ್ಣನಾದ ವಿದ್ಯಾರ್ಥಿಯನ್ನು ಕೇಳಬೇಕು. ಒಂದು ತಿಂಗಳ ಮಹತ್ವವನ್ನು ತಿಳಿಯಲು ಅವಧಿ ಪೂರ್ವದಲ್ಲಿ ಮಗುವಿಗೆ ಜನ್ಮ ನೀಡಿದ ತಾಯಿಯಲ್ಲಿ ಕೇಳಬೇಕು. ಒಂದು ವಾರದ ಮಹತ್ವವನ್ನು



ತಿಳಿಯಲು ವಾರಪತ್ರಿಕೆಯ ಸಂಪಾದಕನನ್ನು ಕೇಳಬೇಕು. ಒಂದು ದಿನದ ಮಹತ್ವವನ್ನು ತಿಳಿಯಲು ದಿನಗೂಲಿಯನ್ನೇ ನಂಬಿರುವ ಕೂಲಿ ಕಾರ್ಮಿಕನನ್ನು ಕೇಳಬೇಕು. ಒಂದು ಗಂಟೆಯ



ಮಹತ್ವ ತಿಳಿಯಲು ಆಪ್ತರಿಗಾಗಿ ಕಾಯುತ್ತಾ ಕುಳಿತಿರುವವರನ್ನು ಕೇಳಬೇಕು. ಒಂದು ನಿಮಿಷದ ಮಹತ್ವವನ್ನು ತಿಳಿಯಲು ರೈಲಿಗೆ ಟಿಕೆಟ್ ತೆಗೆದುಕೊಂಡು ರೈಲು ತಪ್ಪಿಸಿಕೊಂಡ ಪ್ರಯಾಣಿಕನನ್ನು ಕೇಳಬೇಕು. ಒಂದು ಸೆಕೆಂಡಿನ ಮಹತ್ವವನ್ನು ತಿಳಿಯಲು ಅಪಘಾತದಲ್ಲಿ ಕೂದಲೆಳೆಯಲ್ಲಿ ತಪ್ಪಿಸಿಕೊಂಡು ಬದುಕಿದವನನ್ನು ಕೇಳಬೇಕು, ಒಂದು ಮಿಲಿ ಸೆಕೆಂಡಿನ ಮಹತ್ವವನ್ನು ತಿಳಿಯಲು ಒಲಿಂಪಿಕ್ಸ್ ಕ್ರೀಡೆಯಲ್ಲಿ ಚಿನ್ನದ ಪದಕವನ್ನು ಕಳೆದುಕೊಂಡು ಬೆಳ್ಳಿ ಪದಕವನ್ನು ಪಡೆದ ಕ್ರೀಡಾಪಟುವನ್ನು ಕೇಳಬೇಕು ಎಂದಿದ್ದಾರೆ. ಸಮಯದ ಮಹತ್ವವನ್ನು ಅರಿಯಲು ಈ ಇಷ್ಟು ಉದಾಹರಣೆಗಳು ಸಾಕು.

# ಬಂದ್ ಮಾಡಲಾದ ಬಸ್ ಸೇವೆ ಪುನರಾರಂಭಕ್ಕೆ ಆಗ್ರಹ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಸಕಾರಣವಿಲ್ಲದೇ ಬಂದ ಮಾಡಲಾದ ಬಸ್ ಸೇವೆಗಳನ್ನು ಪುನರ್ ಆರಂಭಿಸಬೇಕು ಎಂದು ಆಗ್ರಹಿಸಿ ಪಟ್ಟಣದ ಮರ್ಚೆಂಟ್ ಅಸೋಸಿಯೇಶನ್, ನಗರಾಭಿವೃದ್ಧಿ ಹೋರಾಟ ವೇದಿಕೆ ಸೇರಿದಂತೆ ವಿವಿದ ಪ್ರಗತಿಪರ ಸಂಘಟನೆಗಳು ಮೇ.17 ರಂದು ಸಂಜೆ 4ಗಂಟೆಗೆ ಪಟ್ಟಣದ ಗ್ರಾಮದೇವತೆ ದೇವಸ್ಥಾನದಿಂದ ಪ್ರತಿಭಟನೆ ನಡೆಸುವ ಮೂಲಕ ಕೆಎಸ್‌ಆರ್‌ಟಿಸಿ ಘಟಕಾಧಿಕಾರಿಗಳಿಗೆ ಮನವಿ ಸಲ್ಲಿಸಲು ನಿರ್ಧರಿಸಿವೆ.

ಈ ಕುರಿತು ಮಾಹಿತಿ ನೀಡಿದ ಹೋರಾಟಗಾರ ಬಸವರಾಜ ನಂದಿಕೇಶ್ವರಮಠ, ಈ ಹಿಂದೆ ಆಲಮಟ್ಟಿ ರೇಲ್ವೆ ಸ್ಟೇಷನ್, ಮುಂಬೈ, ನಾಸಿಕ, ರತ್ನಾಗಿರಿ, ವಾಸ್ಕೋ, ಪುಣೆ, ಹಾಸನ, ಕಾಗಿನೆಲೆ ಹೀಗೆ ಹಲವು ಬಸ್‌ಗಳನ್ನು ಮುದ್ದೇಬಿಹಾಳದಿಂದ ಓಡಿಸಲಾಗಿತ್ತಿತ್ತು. ಆದರೆ ದಿಢೀರನೆ ಈ ಬಸ್ಸುಗಳ ಓಡಾಟವನ್ನು ಬಂದ್ ಮಾಡಿದ್ದು ಸಾರ್ವಜನಿಕರು ಪರದಾಡುವಂತಾಗಿದೆ. ಕಾರಣ ಈ ಎಲ್ಲ ಬಸ್‌ಗಳು ಸೇರಿದಂತೆ ಎಲ್ಲ ಬಂದ್ ಮಾಡಲಾದ ಬಸ್‌ಗಳನ್ನು ಪುನರ್ ಆರಂಭಿಸುವಂತೆ ಒತ್ತಾಯಿಸಿ ಮನವಿ ಸಲ್ಲಿಸಲಾಗುತ್ತಿದೆ. ಎಲ್ಲರೂ ಭಾಗಿಯಾಗುವಂತೆ ಮನವಿ ಮಾಡಿಕೊಂಡಿದ್ದಾರೆ.

**ಉದಯರಶ್ಮಿ ದಿನಪತ್ರಿಕೆ**

## ಕಾವ್ಯರಶ್ಮಿ

# ಮಿಲನ


**–ಗೀತಾ ವಸಂತ ಜೋಶಿ**
("ನಮ್ಮ ಕಥಾ ಅರಮನೆ" ಬರಹಗಾರರು)




ಜೊತೆಯಾದೆ ನನ್ನ ಬಾಳ ರಥಕೆ ನೀನಂದು
ಲತೆಯಂತೆ ಬಳಸಿ ನಿನ್ನ ನಾನಿಂತೆ ಇಂದು ನಮ್ಮಿಬ್ಬರ
ಮಿಲನ ಸವಿಯಾದ ಜೇನಿನಂತೆ ಸಮ್ಮಿಲನ ತಂದಿದೆ
ಹರುಷ ಹಾಲ್ಜೇನಿನಂತೆ ॥

ಬಾಳಿನ ಪಯಣದಲಿ ಒಲವ ಧಾರೆ ಇರಲಿ
ನಾಳಿನ ಭಾಗ್ಯದ ಬಾಗಿಲು ನಮಗಾಗಿ ತೆರೆಯಲಿ
ಒಲವೊಂದೆ ನಮ್ಮಲ್ಲಿ ಹೂವಂತೆ ಅರಳಿರಲಿ
ಗೆಲುವಿನ ನಗೆಯೊಂದಿಗೆ ನಮ್ಮ ಬಾಳು ಬೆಳಗಲಿ॥

ನಮ್ಮ ಪ್ರೇಮವು ಈ ಧರೆಯಲಿ ಸ್ವರ್ಗದಂತೆ
ಒಮ್ಮನಸ್ಸಿನ ನಾವು ಹಾರುವ ಬಾನಾಡಿಗಳಂತೆ
ದೇಹವೆರಡಾದರು ಭಾವ ಒಂದೇ ಅಲ್ವೆ ನಮ್ಮದು
ಸ್ನೇಹದ ಸೌಗಂಧದ ಹೂವು ಅರಳಿ ನಗುತಿಹುದು॥



# ಹಳ್ಳಿಯರಿಗೇಕಿಲ್ಲ ಹೆಣ್ಣು



## ಭಾವರಶ್ಮಿ

**– ಪ್ರವೀಣ್ ರಾವ್**
("ನಮ್ಮ ಕಥಾ ಅರಮನೆ" ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**

ಇದೇನು ಈ ರೀತಿ ಶೀರ್ಷಿಕೆ ಇಟ್ಟಿದ್ದೀನಿ ಅಂತ ಯೋಚಿಸುತ್ತಿದ್ದೀರಾ? ಇದು ಹಳ್ಳಿಯಲ್ಲಿ ವಾಸಮಾಡುತ್ತಿರುವ ಗಂಡು ಮಕ್ಕಳಿಗೆ ಹೆಣ್ಣು ಕೊಡಲು ನೀರಾಕರಿಸುತ್ತಿರುವುದು ಅಥವಾ ಯುವತಿಯರೇ ಮದುವೆ ಆಗಲು ಒಪ್ಪದೇ ಬರಿ ನಗರಗಳಿಗೆ ಅದರಲ್ಲೂ ಬೆಂಗಳೂರು, ಫಾರೀನ್ ನಲ್ಲಿರುವ ಗಂಡಿಗೆ ಮದುವೆಯಾಗಲು ಬಯಸುತ್ತಿರುವುದು ಮಾಮೂಲಾಗಿದೆ. ಆ ಗಂಡು ಯಾವ ಕೆಲಸಕ್ಕೆ ಹೋಗುತ್ತಾನೋ, ಎಷ್ಟು ದುಡಿಯುತ್ತಾನೆ, ಅವನ ಹಿನ್ನೆಲೆಯೇನೋ ಏನು ತಿಳಿಯದೆ ಕೇವಲ ಸಾಫ್ಟವೇರ್ ನಲ್ಲಿ ಕೆಲಸವೆಂದೊಡನೆ ಹಿಂದೂ ಮುಂದೂ ಯೋಚಿಸದೇ ಮದುವೆಯಾಗುವುದು ರೂಡಿಯಲ್ಲಿದೆ. ಇತ್ತ ನೂರಾರು ಎಕರೆ ಗದ್ದೆ, ತೋಟ ಇರುವ ರೈತರು, ರೈತ ಕಾರ್ಯದ ಜೊತೆ ಪುರೋಹಿತರು, ಅಡಿಗೆ ಕೆಲಸದವರು, ಇಂತಹವರನ್ನು ಮದುವೆಯಾಗಿ ಪ್ರಕೃತಿಯ ಮಡಿಲಲ್ಲಿ ಆರೋಗ್ಯಕರ ಜೀವನ ನಡೆಸುವುದು ಬೇಕಾಗದೆ ಹೋಗಿದೆ. ಅದರಲ್ಲೂ ಸಹ ಗಂಡು ಮಕ್ಕಳು ಸಹ ಒದಿಯೋ ಅಥವಾ ಓದಿಲ್ಲದಿದ್ದರೂ ಸಹ ಪಟ್ಟಣ–ಕ್ಕೆ ಕೆಲಸ ಅರಸಿ ಹೋಗುತ್ತಾರೆ. ಕೆಲ ಹುಡುಗ ಹುಡುಗಿಯರು ಹಳ್ಳಿಯಲ್ಲೆ ವಾಸಿಸುತ್ತಿದ್ದಾರೆ.

ಈಗ ಬಹುತೇಕ ಹುಡುಗಿಯರು ತಾವು ಮದುವೆಯಾಗುವುದಾದರೆ ಬೆಂಗಳೂರಿನಲ್ಲಿರಬೇಕು ಅಲ್ಲಿ ಸಾಫ್ಟವೇರ್ ಕೆಲಸದಲ್ಲಿರಬೇಕು, ಕಾರು ಇರಬೇಕು, ಅತ್ತೆ ಮಾವ ಇರಬಾರದು ಹೀಗೆ ನೂರಾರು ಷರತ್ತುಗಳನ್ನು ಹಾಕುತ್ತಾರೆ. ಇಷ್ಟೆಲ್ಲಾ ಷರತ್ತು ಒಪ್ಪಿಕೊಂಡು ಮದುವೆಯಾಗಿ ಅವಾಗಲದರೂ ಗಂಡನ ಜೊತೆ ಸುಖವಾಗಿ ಬಾಳುತ್ತಾರಾ ಅದ್ದು ಇಲ್ಲ ಅದರಲ್ಲೂ ಮತ್ತೆ ಕಿರಿಕ್ ಇದ್ದಿದ್ದೇ. ಇದಕ್ಕೆಲ್ಲಾ ಮಕ್ಕಳೇ ನೇರ ಕಾರಣನ ಅವರ ಪೋಷಕರ ಅಥವಾ ಸಮಾಜನಾ ಅನ್ನೋದು ವಿಪರ್ಯಾಸ. ಇತ್ತ ರೈತಾಪಿ ಮಕ್ಕಳು ತಮ್ಮ ಅಣ್ಣ ತಮ್ಮಂದಿರಿಗೆ ಹೆಣ್ಣು ಸಿಗುತ್ತಿಲ್ಲ ಅಂತ ತಿಳಿದು ಅವರು ಸಹ ಪೇಟೆಯಲ್ಲಿರುವ ಗಂಡು ಅಂದುಕೊಂಡು ಹೋಗಿ ಮದುವೆಯಾಗುತ್ತಾರೆ. ಆಮೇಲೆ ನನ್ನ ಸಹೋದರನಿಗೆ ಹೆಣ್ಣು ಸಿಕ್ಕಿಲ್ಲ ಅಂತ ಗೋಳಾಡುತ್ತಾರೆ. ಅದರ ಬದಲು ತಾವು ಇನ್ನೊಬ್ಬ ರೈತಾಪಿ ಮಕ್ಕಳಿಗೆ ಮದುವೆಯಾಗಿ ತಾವು ಸಹ ಹಳ್ಳಿಯ ಸುಂದರವಾದ ಬದುಕು ಬದುಕೋದು ಬಿಟ್ಟು ಬೆಂಗಳೂರು ಎಂಬ ನರಕಕ್ಕೆ ಹೋಗಿ ಸಾಯ್ತಾರೆ. ಕೇಳಿದರೆ ಅದಲ್ಲಾ ನಮ್ಮಿಷ್ಟ ಅಷ್ಟಕ್ಕೂ ಈ ಹಳ್ಳಿಯಲ್ಲೇನಿದೆ. ಅದೇ ಬೆಂಗಳೂರು ಇಲ್ಲಾ ದೊಡ್ಡ ಸಿಟಿಗೆ ಹೋದರೆ ಮಾಲು, ಸಿನಿಮಾ ಥಿಯೇಟ–ರ್, ರೋಡ ಸೈಡ್ ಗಾಡಿ, ಪಬ್ ಬಾರು ಎಲ್ಲಾ ಇದೆ ಎಂಜಾಯ್ ಮಾಡಬಹುದು ಅಂತ ಹೇಳ್ತಾರೆ. ಇನ್ನು ಕೆಲವರು ಹಳ್ಳಿಯಲ್ಲಿ



ಮನೆಯಲ್ಲಿದ್ದರೆ ಎಂಜಾಯ್ ಮಾಡೋಕೆ ಆಗೊಲ್ಲಾ ಅಂತ ಪಟ್ಟಣಕ್ಕೆ ಹೋಗಿ ಯಾವುದಾದರೂ ಕಾಲ್ ಸೆಂಟರ್, ಬಿ.ಪಿ.ಓ. ಇಲ್ಲಾ ಕೆಲವು ಸಣ್ಣ ಪುಟ್ಟ ಕೆಲಸಕ್ಕೆ ಹೋಗಿ ತಾನೇನೋ ಸಾಧನೆ ಮಾಡ್ತಾ ಇದ್ದೀನಿ ಅನ್ನೋ ಭ್ರಮೆಯಲ್ಲಿರುತ್ತಾರೆ. ಇವರುಗಳು ಮನೆಯಲ್ಲಿದ್ದರೆ ನಿಜವಾಗಿಯೂ ಕೆಲಸದ ಅವಶ್ಯಕತೆ ಇದ್ದೋರಿಗೆ ಕೆಲಸ ಸಿಗುತ್ತೆ.

ಅಲ್ಲದೆ ಹಳ್ಳಿಯ ಹುಡುಗ–ರಿಗೆ ಹೆಣ್ಣು ಕೊಡೋದು ಅವನು ಹಳ್ಳಿ ಬಿಟ್ಟು ಬೇರೆ ಕಡೆ ಕೆಲಸ ಮಾಡೋರಿಗೆ ಮಾತ್ರ. ಅದೇ ಜಮೀನು, ತೋಟ, ಪುರೋಹಿತಗೆ, ಅಡುಗೆ ಕೆಲಸ, ಇನ್ನೇನ್ನಾದರು ಕೆಲಸ ಮಾಡುವರಿಗೆ ಪಾಪ ಬಹಳ ಕಷ್ಟ. ನಮ್ಮ ಮಲೆನಾಡಿನಲ್ಲಂತೂ ಹಲವರನ್ನು ನೋಡಿದ್ದೇನೆ ವಯಸ್ಸು ಮೀರಿ ಮದುವೆ ಇಲ್ಲದೆ ಹಾಗೆ ಇದ್ದೋರು. ಇನ್ನು ದೊಡ್ಡ ದೊಡ್ಡ ಶ್ರೀಮಂತರ ಮನೆ ಮಕ್ಕಳು ತೋಟ, ಪುರೋಹಿತರಿಗೆ, ಅಡುಗೆ ಕೆಲಸದವರಿಗೆ ಮದುವೆಗೆ ಹೆಣ್ಣು ಕೊಡೋದು ಕಷ್ಟವಾಗಿದೆ. ಇತ್ತ ಎಲ್ಲಾ ಸಿಟಿಗೆ ಹೋಗಿ ಕಂಪ್ಯೂಟ–ರ್ ಮುಂದೆ ಕೂತು ತಮ್ಮ ಅರೋಗ್ಯ ಹಾಳುಮಾಡಿಕೊಂಡು ಒದ್ದಾಡುತ್ತಿರುತ್ತಾರೆ. ಅದೇ ಹಳ್ಳಿಯಲ್ಲಿ ಸಣ್ಣಪುಟ್ಟ ಮನೆಕೆಲಸ ಮಾಡಿಕೊಂಡು ಅರೋಗ್ಯವಾಗಿ ಸುಂದರವಾದ ಜೀವನ ನಡೆಸುವುದು ಇವರಿಗೆ ಬೇಡವಾಗಿದೆ.

ಇದ್ಯಾಕೆ ಇಷ್ಟೆಲ್ಲಾ ಹೇಳುತ್ತಿದ್ದೀನಿ ಅಂದರೆ ಹಳ್ಳಿಯ ಜೀವನ ಬಹಳ ಚೆನ್ನಾಗಿರುತ್ತದೆ ಇದು ಎಲ್ಲರಿಗೂ ತಿಳಿದ ವಿಷಯ. ಅಲ್ಲಿಯೂ ಒಳ್ಳೊಳ್ಳೆ ಮನೆಗಳಾಗಿವೆ, ಫೋನ್, ವೈಫೈ, ಕಾರು, ಗಾಡಿ ಎಲ್ಲಾ ಸೌಕರ್ಯಗಳು ಆಗಿದೆ. ಇನ್ನು ಎಷ್ಟೇ ಕುಗ್ರಾಮವೆಂದರೂ ಕೆಲವೊಂದು ಸೌಕರ್ಯ ಇದ್ದೆ ಇದೆ. ಇಂತಹ ಹಳ್ಳಿ ಮನೆಗೆ ಮದುವೆ ಆಗಿ ಹೋದರೆ. ಹೆಣ್ಣು ಮಕ್ಕಳು ತಮಗಿಷ್ಟವಾದ ರುಚಿರುಚಿಯಾದ ತಿನಿಸುಗಳನ್ನು ಮಾಡಿಕೊಂಡು ತಿಂದು, ಕೆಲಸ ಮಾಡಿಸಿ (ಅನುಕೂಲ ಅಷ್ಟಿಲ್ಲದಿದ್ದರೆ ಕೆಲಸ ಮಾಡಿ) ಅಗಾಗ ಪೇಟೆ ಶಾಪಿಂಗ್ ಇತ್ಯಾದಿ ಮಾಡಿ ಸಿಟಿಗಿಂತ ಒಳ್ಳೆಯ ಜೀವನವನ್ನು ನಡೆಸಬಹುದು. ಅದು ಬಿಟ್ಟು ಗೊತ್ತಿಲ್ಲದ ಊರಿಗೆ ಹೋಗಿ ನರಕ ಅನುಭವಿಸುವುದಕ್ಕಿಂತ ಹಳ್ಳಿಯಲ್ಲೇ ಉತ್ತಮ ಅನ್ನೋದು ನನ್ನ ಭಾವನೆ.

ಇದ್ಯಾಕೆ ಹೇಳ್ತಿದ್ದೀನಿ ಅಂದರೆ ನಾನು ನಮ್ಮೂರಲ್ಲಿ ಬಹುತೇಕ ಹುಡುಗರಿಗೆ ಮದುವೆಯಾಗಿಲ್ಲ. ಇನ್ನು ಕೆಲವರಿಗೆ ಮದುವೆ ಆಗಿದೆ. ಆ ಹುಡುಗಿಯರು ಮದುವೆ ಆಗಿಬಂದು ಮಕ್ಕಳಾದ್ರು ಅವರು ಮನೆ ತೋಟ, ನೋಡ್ಕೊಂಡು, ಮನೆಯ ಜವಾಬ್ದಾರಿ ಎಲ್ಲಾ ವಹಿಸಿಕೊಂಡು ಆರಾಮಾಗಿದ್ದಾರೆ, (ಅವರ ಒಳಗಿನ ವಿಷಯ ಬಿಟ್ಟು ) ದ್ವಿಚಕ್ರ ವಾಹನ ತೆಗೆದುಕೊಂಡಿದ್ದಾರೆ, ಅವರ ಗಂಡಂದಿರು ಕಾರು ಇಟ್ಟುಕೊಂಡಿದ್ದಾರೆ, ಕಾರ್ಯಕ್ರಮ, ಫಿಲಂ, ಎಲ್ಲಾ ಕಡೆ ಓಡಾಡಿಕೊಂಡು ಇದ್ದಾರೆ. ಜೊತೆಗೆ ಊರಿನ ಹೆಣ್ಣುಮಕ್ಕಳೆಲ್ಲಾ ಸೇರಿಕೊಂಡು ಭಜನೆ ಬ್ಯಾಚ್ ಮಾಡಿಕೊಂಡಿದ್ದಾರೆ, ಈ ಬ್ಯಾಚ್ ಎಲ್ಲೆಲ್ಲಿ ಭಜನೆಗೆ ಕರೆಯುತ್ತಾರೋ ಆ ಉರುಗಳಿಗೆ ಹೋಗಿ ಭಜನೆ ಮಾಡಿ ಬರುತ್ತಾರೆ. ಅಗಾಗ ಬೆಂಗಳೂರು, ಮಂಗಳೂರು ಹೀಗೆ ಓಡಾಡುತ್ತಾರೆ. ಅದನ್ನು ನೋಡಿದ ಮೇಲೆ ನನಗೆ ಅನಿಸಿದ್ದು, ಇಂತಹ ಒಳ್ಳೆಯ ಜೀವನವನ್ನು ಬಿಟ್ಟು ಬೆಂಗಳೂರು, ಪಟ್ಟಣ/ಫಾರೀನ್ ಅಂತ ಇಲ್ಲಸಲ್ಲದ ಸಾಬುಬು ಹೇಳಿಕೊಂಡು ಒಂದು ಒಳ್ಳೆಯ ಜೀವನ ಹಾಳುಮಾಡಿಕೊಳ್ಳುತ್ತಿರುವುದು ಹಲವಾರು ಜನರನ್ನು ನೋಡಿದ್ದೇವೆ.

ಅದಕ್ಕೆ ನನ್ನ ಕಳಕಳಿಯ ಮನವಿ ನಿಜವಾಗಲೂ ನೀವು ಸಾಧನೆ ಮಾಡಬೇಕು ಅಂ–ದುಕೊಂಡು ಅದನ್ನು ಸಾಧಿಸಲಿಕ್ಕೆ ಬೇಕೇ ಬೇಕು ಅನ್ನೋ ಹಾಗಿದ್ದರೆ ದೊಡ್ಡದೊಡ್ಡ ಪಟ್ಟಣಕ್ಕೆ ಹೋಗಿ, ಇನ್ನು ಕೆಲವರು ವಿಧಿಯಿಲ್ಲದೇ ಹೋಗುವರು ಹೋಗಲಿ, ಅದನ್ನು ಬಿಟ್ಟು ಏನು ಇಲ್ಲದೆ ಮದುವೆ ಆಗಿ ಜೀವನ ಕಳೆಯುತ್ತೀರಿ ಅನ್ನೋರು ಹಳ್ಳಿಯ ಹುಡುಗರಿಗೆ ಮದುವೆಯಾಗಿ ಜೊತೆಗೆ ಹಳ್ಳಿ ಹುಡುಗಿಯರು ಆದಷ್ಟು ರೈತಾಪಿ ಮಕ್ಕಳಿಗೆ ಮದುವೆಯಾಗಿ ರೈತ ಕುಟುಂಬವನ್ನು ಬೆಳೆಸಿರಿ ಎನ್ನುವುದು ನನ್ನ ಕಳಕಳಿಯ ಮನವಿ.

# ಕೇಜ್ರಿವಾಲ್, ಎಎಪಿ ವಿರುದ್ಧ ಶೀಘ್ರದಲ್ಲೇ ಪ್ರಾಸಿಕ್ಯೂಷನ್ ದೂರು ಸಲ್ಲಿಕೆ :ಇಡಿ




ನವದೆಹಲಿ: ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಮತ್ತು ಆಮ್ ಆದ್ಮಿ ಪಕ್ಷದ (ಎಎಪಿ) ವಿರುದ್ಧ ಶೀಘ್ರದಲ್ಲೇ ಪ್ರಾಸಿಕ್ಯೂಷನ್ ದೂರು ಸಲ್ಲಿಸುವುದಾಗಿ ಜಾರಿ ನಿರ್ದೇಶನಾಲಯ ಗುರುವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಇಡಿ ಪರ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್‌ವಿ ರಾಜು, ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಂಕರ್ ದತ್ತಾ ಅವರ ಪೀಠಕ್ಕೆ, "ಅರವಿಂದ್ ಕೇಜ್ರಿವಾಲ್ ಮತ್ತು ಎಎಪಿ ವಿರುದ್ಧ ಪ್ರಾಸಿಕ್ಯೂಷನ್ ದೂರು (ಚಾರ್ಜ್ ಶೀಟ್) ಸಲ್ಲಿಸಲು ನಾವು ಪ್ರಸ್ತಾಪಿಸುತ್ತಿದ್ದೇವೆ; ನಾವು ಅದನ್ನು ಶೀಘ್ರದಲ್ಲೇ ಮಾಡುತ್ತೇವೆ" ಎಂದು ಕೇಜ್ರಿವಾಲ್ ಅವರ ಬಂಧನದ ವಿರುದ್ಧದ ಮನವಿಯ ವಿಚಾರಣೆಯ ಸಂದರ್ಭದಲ್ಲಿ ಇಡಿ ಈ ಹೇಳಿಕೆಗಳನ್ನು ನೀಡಿದೆ.

ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿಯನ್ನು ಮಾರ್ಚ್ 21 ರಂದು ಬಂಧಿಸಲಾಗಿತ್ತು. ದೆಹಲಿಯ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಮನಿ ಲಾಂಡರಿಂಗ್ ಪ್ರಕರಣದಲ್ಲಿ ಮೇ 10 ರಂದು ಸುಪ್ರೀಂ ಕೋರ್ಟ್ ಕೇಜ್ರಿವಾಲ್‌ಗೆ ಜೂನ್ 1 ರವರೆಗೆ ಮಧ್ಯಂತರ ಜಾಮೀನು ನೀಡಿತು. ಅವರು ಜೂನ್ 2 ರಂದು ಶರಣಾಗಬೇಕು.

ಲೆಫ್ಟಿನೆಂಟ್ ಗವರ್ನರ್ ಅವರ ಅನುಮೋದನೆಯನ್ನು ಪಡೆಯಲು ಸಂಪೂರ್ಣವಾಗಿ ಅಗತ್ಯವಿಲ್ಲದಿದ್ದರೆ ಅವರ ಕಚೇರಿ ಅಥವಾ ದೆಹಲಿ ಸಚಿವಾಲಯಕ್ಕೆ ಭೇಟಿ ನೀಡುವುದನ್ನು ಮತ್ತು ಅಧಿಕೃತ ಕಡತಗಳಿಗೆ ಸಹಿ ಮಾಡುವುದನ್ನು ನ್ಯಾಯಾಲಯ ನಿರ್ಬಂಧಿಸಿದೆ.

ಈ ಪ್ರಕರಣವು 2021-22ರ ದೆಹಲಿ ಸರ್ಕಾರದ ಅಬಕಾರಿ ನೀತಿಯ ರಚನೆ, ಕಾರ್ಯಗತಗೊಳಿಸುವಿಕೆಯಲ್ಲಿ ಭ್ರಷ್ಟಾಚಾರ ಮತ್ತು ಅಕ್ರಮ ಹಣ ವರ್ಗಾವಣೆಗೆ ಸಂಬಂಧಿಸಿದೆ, ಅದನ್ನು ಈಗ ರದ್ದುಗೊಳಿಸಲಾಗಿದೆ.

# ಕೆಸರುಗದ್ದೆಯಂತಾದ ಮುಖ್ಯ ರಸ್ತೆಗೆ ಮುಕ್ತಿ ನೀಡಲು ಗ್ರಾಮಸ್ಥರ ಆಗ್ರಹ

**ಉದಯರಶ್ಮಿ ನ್ಯೂಸ್**



ದೇವರಹಿಪ್ಪರಗಿ: ಗ್ರಾಮದ ಪಂಚಾಯಿತಿ, ದೇವಾಲಯ ಸಂಪರ್ಕ ರಸ್ತೆಯನ್ನು ಕೆಸರು ಹಾಗೂ ತ್ಯಾಜ್ಯ ನೀರಿನಿಂದ ಮುಕ್ತಗೊಳಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕೆಂದು ಗ್ರಾಮದ ಪ್ರಮುಖರು ಆಗ್ರಹಿಸಿದ್ದಾರೆ.

ತಾಲ್ಲೂಕಿನ ಯಾಳವಾರ ಗ್ರಾಮದಲ್ಲಿ ನೂತನ ಸೇತುವೆಯ ಮೂಲಕ ಗ್ರಾಮ ಪಂಚಾಯಿತಿ ಹಾಗೂ ದೇವಾಲಯವನ್ನು ಸಂಪರ್ಕಿಸುವ ಮುಖ್ಯ ರಸ್ತೆ ಸೇರಿದಂತೆ ಅಂಬಿಗರ ಚೌಡಯ್ಯ ವೃತ್ತ ಗಲೀಜು ನೀರಿನಿಂದ ಆವೃತ್ತವಾಗಿದ್ದು, ರಸ್ತೆ ನಡೆಯಲು ಬಾರದಂತಾ ಸಾರ್ವಜನಿಕರು, ಬೈಕ್ ಸವಾರರು ಪರದಾಡುವಂತಾಗಿದೆ.

ಈ ಕುರಿತು ಗ್ರಾಮದ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ನಿಂಗನಗೌಡ ಖಾನಾಪೂರ ಮಾತನಾಡಿ, ಗ್ರಾಮದ ಚರಂಡಿಗಳು ಚಿಕ್ಕದಾದ ಪರಿಣಾಮ ಮಲೀನ ಹಾಗೂ ತ್ಯಾಜ್ಯ ನೀರು ಅಲ್ಲಿಯೇ ನಿಂತು ಇಡೀ ರಸ್ತೆ ನಡೆಯಲು ಬಾರದಂತಾಗಿದೆ. ಬೇಸಿಗೆಯ ಸಮಯದಲ್ಲಿಯೇ ರಸ್ತೆ ಹಾಗೂ ಚರಂಡಿಗಳ ಸ್ಥಿತಿ ಈ ರೀತಿಯಾದರೆ ಮುಂದೆ ಬರುವ ಮಳೆಗಾಲದಲ್ಲಿ ರಸ್ತೆಯ ಪರಿಸ್ಥಿತಿ ಹೇಗಾಗುತ್ತದೆ ಎಂದು ಊಹಿಸುವುದು ಕಷ್ಟ. ಆದ್ದರಿಂದ ಮಳೆಗಾಲ ಆರಂಭಗೊಳ್ಳುವ ಮುಂಚೆ ನೀರು ಸರಾಗವಾಗಿ ಸಾಗಲು ಸ್ಥಳೀಯ ಗ್ರಾಮ ಪಂಚಾಯಿತಿ ಕೂಡಲೇ ಕ್ರಮ ವಹಿಸಬೇಕು ಎಂದರು.

ಮಳೆಗಾಲದಲ್ಲಿ ಮಳೆನೀರು, ಗಲೀಜು, ತ್ಯಾಜ್ಯದಿಂದ ಸಾಂಕ್ರಾಮಿಕ ರೋಗಗಳು ಉಲ್ಬಣಿಸಿ ಜನತೆ ನರಳುವಂತಾಗಬಾರದು, ಆದ್ದರಿಂದ ಕೂಡಲೇ ರಸ್ತೆಯಲ್ಲಿ ಯಾವುದೇ ನೀರು ನಿಲ್ಲದಂತೆ ಕ್ರಮ ಕೈಗೊಂಡು ಸ್ವಚ್ಛವಾಗಿರುವಂತೆ ಮಾಡಿದಲ್ಲಿ ಆರೋಗ್ಯ ದೃಷ್ಟಿಯಿಂದ ಒಳ್ಳೆಯದು ಹಾಗೂ ಚೌಡಯ್ಯ ವೃತ್ತಕ್ಕೂ ಮೆರಗು ಜೊತೆಗೆ ಸಾರ್ವಜನಿಕ-ರಿಗೂ ಸಹಕಾರಿಯಾಗಲಿದೆ ಎಂದು ಗ್ರಾಮ ಪಂಚಾಯಿತಿ ಮಾಜಿಅಧ್ಯಕ್ಷ ದಂಡುಗೌಡ ನಾಗರಾಳ, ಮಾಜಿ ಸದಸ್ಯ ಸಂಗನಗೌಡ ತೆಗ್ಗಿನಮನಿ, ಕಟ್ಟಡ ಕಾರ್ಮಿಕ ಸಂಘದ ಅಧ್ಯಕ್ಷ ನೀಲಕಂಠ ತೋಳಬಂದಿ ಆಗ್ರಹಿಸಿದ್ದಾರೆ.

# ಮೇ.20 ರಿಂದ ದುರ್ಗಾದೇವಿ-ಚಂದ್ರಾದೇವಿ ಜಾತ್ರಾ ಮಹೋತ್ಸವ

**ಉದಯರಶ್ಮಿ ನ್ಯೂಸ್**

ಕೊಲ್ಹಾರ: ತಾಲೂಕಿನ ಸುಕ್ಷೇತ್ರ ಹಣಮಾಪೂರ(ಗೂಗಿಹಾಳ) ಗ್ರಾಮದಲ್ಲಿ ಪ್ರತಿ 3 ವರ್ಷಕ್ಕೊಮ್ಮೆ ಜರಗುವ ದುರ್ಗಾದೇವಿ ಹಾಗೂ ಚಂದ್ರಾದೇವಿ 8 ನೇ ವರ್ಷದ ಅಗ್ನಿ ಪ್ರವೇಶ ಹಾಗೂ ಜಾತ್ರಾ ಮಹೋತ್ಸವವು ಮೇ.20 ರಿಂದ 22 ರವರೆಗೆ ಮೂರು ದಿನಗಳ ಕಾಲ ಬಹಳ ವಿಜೃಂಭಣೆಯಿಂದ ಜರಗುವದು ಎಂದು ಜಾತ್ರಾ ಕಮಿಟಿ ತಿಳಿಸಿದೆ.

ಮೇ.20 ರಂದು ಸೋಮವಾರ ಸಾಯಂಕಾಲ 4 ಗಂಟೆಗೆ ಸಕಲ ವಾದ್ಯ ವೈಭವಗಳೊಂದಿಗೆ ಅಪಾರ ಭಕ್ತರ ಸಮ್ಮುಖದಲ್ಲಿ ಗ್ರಾಮಕ್ಕೆ ದೇವಿಯನ್ನು ಬರಮಾಡಿಕೊಳ್ಳುವುದು.

ರಾತ್ರಿ 7 ಗಂಟೆಗೆ ಮನಮೋಹಕ ಆಕಾಶ ಚಿತ್ತಾರದ ಬಿರಿಸು ಬಾಣಿನ ವರ್ಣರಂಜಿತ ಚಿತ್ರ-ವಿಚಿತ್ರ ಮದ್ದು ಸುಡುವ ಕಾರ್ಯಕ್ರಮ ಜರಗುವದು. ಅದೇ ದಿನ ರಾತ್ರಿ:10 ಗಂಟೆಗೆ ಮುಕ್ತ ಕಬಡ್ಡಿ ಪಂದ್ಯಾವಳಿಗಳು ಜರಗುವವು.

ಮೇ.21 ರಂದು ಮಂಗಳವಾರ ಬೆಳಿಗ್ಗೆ:8 ಗಂಟೆಗೆ ಶಾಸ್ತ್ರೋಕ್ತವಾಗಿ ಹಲವು ಪೂಜಾ ಕಂಕೈರ್ಯಗಳ ಮೂಲಕ ದುರ್ಗಾದೇವಿ ಹಾಗೂ ಚಂದ್ರಾದೇವಿಯ ಉಡಿ ತುಂಬುವ ಕಾರ್ಯಕ್ರಮ ಜರಗುವದು.

ಮದ್ಯಾಹ್ನ 12 ಗಂಟೆಗೆ ಮಹಿಳೆಯರಿಗಾಗಿ ರಂಗೋಲಿ ಸ್ಪರ್ದೆ ಜರಗುವದು. ನಂತರ ಮದ್ಯಾಹ್ನ 2 ಗಂಟೆಗೆ 60 ಕೆ.ಜಿ ತೂಕದ ಚೀಲ ಹೊತ್ತೋಡುವ ಸ್ಪರ್ಧೆ ಜರಗುವದು.ಅದೇ ದಿನ ರಾತ್ರಿ:8 ಗಂಟೆಗೆ ಹಾಲು ಹಲ್ಲಿನ ಟಗರಿನ ಕಾಳಗ ಹಾಗೂ ರಾತ್ರಿ 9 ಗಂಟೆಗೆ 2 ಹಲ್ಲಿನ ಟಗರಿನ ಕಾಳಗ ಜರಗುವವು. ಯಂಗ್ □□□ಂಡ್ ಎನರ್ಜಿ ಉಳ್ಳಾಗಡ್ಡಿ ಹಮಾಲರ ಸಂಘದಿಂದ ಮಹಾ ಅನ್ನದಾಸೋಹ ಜರಗುವದು.

ಮೇ.22 ರಂದು ಬುಧವಾರ ಬೆಳಿಗ್ಗೆ: 10 ಗಂಟೆಗೆ ಗಂಗಾಸೀತಾಳದಿಂದ ಸಕಲ ವಾದ್ಯ ವೈಭವಗಳ ಸಂಭ್ರಮದೊಂದಿಗೆ ದುರ್ಗಾದೇವಿ ಹಾಗೂ ಚಂದ್ರಾದೇವಿಯರನ್ನು ಬರಮಾಡಿಕೊಂಡು ಅಗ್ನಿ ಪ್ರವೇಶ ಕಾರ್ಯಕ್ರಮ ಜರಗುವದು.ನಂತರ ಮದ್ಯಾಹ್ನ 2 ಗಂಟೆಗೆ ಮನುಷ್ಯರ ತೆರಬಂಡಿ ಸ್ಪರ್ದೆ ಜರಗುವದು. ಮದ್ಯಾಹ್ನ 3 ಗಂಟೆಗೆ ಹಗ್ಗ ಜಗ್ಗಾಟ ಸ್ಪರ್ದೆ ಜರಗುವದು. ನಂತರ ಮದ್ಯಾಹ್ನ 4 ಗಂಟೆಗೆ ಎತ್ತಿನ ದಿಂಡಿನ ರೇಸ್ ಜರಗುವದು. ಅದೇ ದಿನ ಎಲ್ಲ ಭಕ್ತಾಧಿಗಳಿಗೆ ಕಲ್ಲಪ್ಪ,ಪರಮಪ್ಪ ಹಾಗೂ ಸಂಗಪ್ಪ ಬರಗಿ ಪರಿವಾರದಿಂದ ಮಹಾ ಅನ್ನದಾಸೋಹ ಜರಗುವದು. ಮೂರು ದಿನಗಳ ಕಾಲ ನಡೆಯುವ ಜಾತ್ರಾ ಮಹೋತ್ಸವಕ್ಕೆ ಸುತ್ತ ಮುತ್ತಲಿನ ಗ್ರಾಮದಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಜಾತ್ರಾ ಕಮಿಟಿ ಪ್ರಕಟಣೆಗೆ ತಿಳಿಸಿದೆ.

ದುರ್ಗಾದೇವಿ ಹಾಗೂ ಚಂದ್ರಾದೇವಿ 8ನೇ ವರ್ಷದ ಅಗ್ನಿ ಪ್ರವೇಶ ಹಾಗೂ ಜಾತ್ರಾ ಮಹೋತ್ಸವದ ಅಂಗವಾಗಿ ಮೇ.22 ರಂದು ಬುಧವಾರ ರಾತ್ರಿ: 10 ಗಂಟೆಗೆ ಅಂಜನಿಪುತ್ರ ಕಲಾಬಳಗ ಚಿಕ್ಕಾಲಗುಂಡಿಯವರ ತಾಯಿಯ ಋಣ ,ಮಣ್ಣಿನ ಗುಣ ಅಥ-ರ್ಾತ ಕರಿಮಣಿ ಮಾಲಿಕ ನೀನಲ್ಲಾ ಎಂಬ ಸುಂದರ ಸಾಮಾಜಿಕ ಹಾಸ್ಯ ಭರಿತ ನಾಟಕ ಜರಗುವದು. ನಾಟಕದ ದಿವ್ಯ ಸಾನಿಧ್ಯವನ್ನು ವೇ. ಮೂ.ಶಿವಾನಂದಸ್ವಾಮಿ ಹಿರೇಮಠ ವಹಿಸುವರು. ಉದ್ಘಾಟನೆಯನ್ನು ಸಕ್ಕರೆ,ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ನೇರವೇರಿಸುವರು. ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಜ್ಯೋತಿ ಬೆಳಗಿಸುವರು. ಅಧ್ಯಕ್ಷತೆಯನ್ನು ಗ್ರಾಮದ ಗಣ್ಯರಾದ ಶರಣಗೌಡ ಪಾಟೀಲ ವಹಿಸುವರು. ನಾಟಕದ ಉದ್ಘಾಟನಾ ಕಾರ್ಯಕ್ರಮಕ್ಕೆ ಅನೇಕ ಗಣ್ಯ ಮಾನ್ಯರು ಭಾಗವಹಿಸುವರು.

# ಲೈಂಗಿಕ ಕಿರುಕುಳ ಪ್ರಕರಣ: ಎಚ್.ಡಿ.ರೇವಣ್ಣಗೆ ಮಧ್ಯಂತರ ಜಾಮೀನು

**ಉದಯರಶ್ಮಿ ನ್ಯೂಸ್**

ಬೆಂಗಳೂರು: ಮನೆಕೆಲಸದಾಕೆಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣದಲ್ಲಿ ಜೆಡಿಎಸ್ ಶಾಸಕ ಹಾಗೂ ಮಾಜಿ ಸಚಿವ ಎಚ್.ಡಿ ರೇವಣ್ಣ ಅವರಿಗೆ ಜನಪ್ರತಿನಿಧಿಗಳ ನ್ಯಾಯಾಲಯ ಗುರುವಾರ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

47ರ ಹರೆಯದ ಮನೆ ಕೆಲಸದಾಕೆಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರೇವಣ್ಣ ಹಾಗೂ ಅವರ ಪುತ್ರ, ಸಂಸದ ಪ್ರಜ್ವಲ್ ವಿರುದ್ಧ ಹಾಸನ ಜಿಲ್ಲೆಯ ಹೊಳೆನರಸೀಪುರ ಪಟ್ಟಣ ಪೊಲೀಸ್ ಠಾಣೆಯಲ್ಲಿ ಏಪ್ರಿಲ್ 28ರಂದು ದೂರು ದಾಖಲಾಗಿತ್ತು.

ಪ್ರಜ್ವಲ್ ಏಪ್ರಿಲ್ 27 ರಂದು ಜರ್ಮನಿಗೆ ತೆರಳಿದ್ದಾರೆ ಮತ್ತು ಇನ್ನೂ ತಲೆಮರೆಸಿಕೊಂಡಿದ್ದಾರೆ. 66ರ ಹರೆಯದ ಶಾಸಕರ ಮನೆಯಲ್ಲಿ ತಂದೆ-ಮಗ ತನಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ದೂರುದಾರೆ ಆರೋಪ ಮಾಡಿದ್ದಾರೆ.

ಪ್ರಜ್ವಲ್ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪ ಮತ್ತು ಸಂಬಂಧಿತ ಪ್ರಕರಣಗಳ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ಮಾಜಿ ಸಚಿವರನ್ನು ಕಸ್ಟಡಿಗೆ ಕೋರಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ರೇವಣ್ಣ ಪರ ವಕೀಲರು ನಿರೀಕ್ಷಣಾ ಜಾಮೀನು ಕೋರಿದ್ದರು. ಆದ-ರೆ, 42ನೇ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟ್ (ಎಸಿಎಂಎಂ) ವಿಚಾರಣೆ ನಡೆಸಿ ಶುಕ್ರವಾರದವರೆಗೆ ಅವರಿಗೆ ಮಧ್ಯಂತರ ಪರಿಹಾರ ನೀಡಿದೆ.

ಜೆಡಿ(ಎಸ್) ಮುಖ್ಯಸ್ಥರು, ಮಾಜಿ ಪ್ರಧಾನಿ ಎಚ್ ಡಿ ದೇವೇಗೌಡರ ಪುತ್ರ ಎಚ್.ಡಿ ರೇವಣ್ಣ ಹಾಗೂ ಪ್ರಜ್ವಲ್ ಅವ-ರಿಗೆ ತನಿಖೆಗೆ ಹಾಜರಾಗುವಂತೆ ಎಸ್‌ಐಟಿ ಎರಡು ಬಾರಿ ನೋಟಿಸ್ ಕಳುಹಿಸಿದ್ದರೂ, ಇಬ್ಬರೂ ಅದನ್ನು ಕೈ ಬಿಟ್ಟಿದ್ದಾರೆ.



ಗುರುವಾರ ರೇವಣ್ಣ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದ್ದು, ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಎಸ್‌ಐಟಿ ತನ್ನ ಕಸ್ಟಡಿಗೆ ಅಥವಾ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುವಂತೆ ಕೋ-ರಿತ್ತು. ಎರಡೂ ಕಡೆಯ ವಾದವನ್ನು ಆಲಿಸಿದ ನ್ಯಾಯಾಲಯ, ಶುಕ್ರವಾರ ಮತ್ತೆ ವಿಚಾರಣೆ ನಡೆಸಲು ನಿರ್ಧರಿಸಿ ಅಲ್ಲಿಯವರೆಗೆ ರೇವಣ್ಣ ಅವರಿಗೆ ಸಮಾಧಾನ ನೀಡಿದೆ.

ಚುನಾಯಿತ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಸೋಮವಾರ ರೇವಣ್ಣ ಅವರಿಗೆ ಜಾಮೀನು ಮಂಜೂರು ಮಾಡಿದೆ. ಸೋರಿಕೆಯಾದ ವೀಡಿಯೊಗಳಲ್ಲಿ ಕಂಡುಬರುವಂತೆ ಪ್ರಜ್ವಲ್ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಮಹಿಳೆಯೊಬ್ಬರನ್ನು ಅಪಹರಿಸಿದ್ದಾರೆ ಎಂದು ಅವರ ಮೇಲೆ ಆರೋಪ ಕೇಳಿಬಂದಿತ್ತು. ಪ್ರಸ್ತುತ ರೇವಣ್ಣ ಜೈಲಿನಿಂದ ಬಿಡುಗಡೆಯಾಗಿದ್ದು, ಆ ಪ್ರಕರಣದಲ್ಲಿ ಮೇ 4ರಂದು ಅವರನ್ನು ಎಸ್‌ಐಟಿ ಬಂಧಿಸಿತ್ತು.

33 ವರ್ಷದ ಪ್ರಜ್ವಲ್ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಗಳನ್ನು ಎದುರಿಸುತ್ತಿದ್ದಾರೆ. ಈ ಹಗರಣ ರಾಜಕೀಯ ಬಿರುಗಾಳಿ ಎಬ್ಬಿಸಿದ್ದು, ಆಡಳಿತಾರೂಢ ಕಾಂಗ್ರೆಸ್ ಮತ್ತು ಬಿಜೆಪಿ-ಜೆಡಿ(ಎಸ್) ವಾಕ್ಸಮರದಲ್ಲಿ ತೊಡಗಿವೆ.

ಏಪ್ರಿಲ್ 26 ರಂದು ಮೊದಲ ಹಂತದಲ್ಲಿ ಚುನಾವಣೆ ನಡೆದ ಹಾಸನ ಲೋಕಸಭೆ ಕ್ಷೇತ್ರದಿಂದ ಬಿಜೆಪಿ-ಜೆಡಿ (ಎಸ್) ಮೈತ್ರಿಕೂಟದ ಜಂಟಿ ಅಭ್ಯರ್ಥಿಯಾಗಿದ್ದರು ಪ್ರಜ್ವಲ್.

ಕಾನೂನು ಕ್ರಮ ಎದುರಿಸಲು ಪ್ರಜ್ವಲ್ ಅವರನ್ನು ದೇಶಕ್ಕೆ ಕರೆತರುವ ಪ್ರಯತ್ನದಲ್ಲಿ ಇಂಟರ್‌ಪೋಲ್ ಬ್ಲೂ ಕಾರ್ನರ್ ನೋಟಿಸ್ ನೀಡಿದ್ದರೂ ಇನ್ನೂ ನಿರೀಕ್ಷಿತ ಪರಿಣಾಮ ಬೀರಿಲ್ಲ.

## ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ । ಬಂಧನದಲ್ಲಿ ಕೊಳೆಯುತ್ತಿರುವ 17 ವಿದೇಶಿಯರು

# ಅಸ್ಸಾಂ ಬಂಧನ ಕೇಂದ್ರದಲ್ಲಿರುವ ವಿದೇಶಿಯರನ್ನು ಗಡಿಪಾರು ಮಾಡಿ



ನವದೆಹಲಿ: ಅಸ್ಸಾಂನ ಬಂಧನ ಕೇಂದ್ರದಲ್ಲಿ ಕೊಳೆಯುತ್ತಿರುವ 17 ವಿದೇಶಿಯರನ್ನು ಗಡಿಪಾರು ಮಾಡುವಂತೆ ಸುಪ್ರೀಂ ಕೋರ್ಟ್ ಗುರುವಾರ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದ್ದು, ಅವರ ವಿರುದ್ಧ ಯಾವುದೇ ಅಪರಾಧ ದಾಖಲಾಗಿಲ್ಲ ಎಂದು ಹೇಳಿದೆ.

ಅಸ್ಸಾಂನ ಬಂಧನ ಕೇಂದ್ರದಲ್ಲಿ 17 ಘೋಷಿತ ವಿದೇಶಿಯರನ್ನು ಬಂಧಿಸಲಾಗಿದೆ ಎಂದು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಸಲ್ಲಿಸಿದ ವರದಿಯನ್ನು ನ್ಯಾಯಮೂರ್ತಿಗಳಾದ ಅಭಯ್ ಎಸ್ ಓಕಾ ಮತ್ತು ಉಜ್ಜಲ್ ಭುಯಾನ್ ಅವರ ಪೀಠವು ಗಮನಿಸಿದೆ.

"ಕೇಂದ್ರ ಸರ್ಕಾರವು ಈ 17 ವಿದೇಶಿಯರ ವಿರುದ್ಧ ಯಾವುದೇ ಅಪರಾಧ ದಾಖಲಾಗಿಲ್ಲವಾದ್ದ-ರಿಂದ ಅವರನ್ನು ಗಡಿಪಾರು ಮಾಡಲು ತಕ್ಷಣದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ನಾವು ಅಭಿಪ್ರಾಯಪಟ್ಟಿದ್ದೇವೆ" ಎಂದು ಪೀಠ ಹೇಳಿದೆ.

ಹಲವಾರು ವಿದೇಶಿಯರು ವರ್ಷಗಳಿಂದ ಬಂಧನ ಕೇಂದ್ರಗಳಲ್ಲಿ ಕೊಳೆಯುತ್ತಿರುವುದನ್ನು ಗಮನಿಸಿ, ಏಪ್ರಿಲ್‌ನಲ್ಲಿ ಸುಪ್ರೀಂ ಕೋರ್ಟ್ ಅಸ್ಸಾಂನ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಎರಡು ವರ್ಷಗಳಿಗೂ ಹೆಚ್ಚು ಕಾಲ ಬಂಧಿತರಾಗಿರುವ ವಿದೇಶಿಯರ ಬಗ್ಗೆ ತಿಳಿಸುವಂತೆ ಕೇಳಿತ್ತು.

ವಿದೇಶಿಯರಿಗೆ ಲಭ್ಯವಿರುವ ಸೌಲಭ್ಯಗಳನ್ನು ಕಂಡುಹಿಡಿಯಲು ಬಂಧನ ಕೇಂದ್ರಗಳಿಗೆ ಭೇಟಿ ನೀಡಲು ತಂಡವನ್ನು ರಚಿಸುವಂತೆ ಕಾನೂನು ಸೇವಾ ಪ್ರಾಧಿಕಾರಕ್ಕೆ ನಿರ್ದೇಶನ ನೀಡಿದೆ. ರಾಜ್ಯದಲ್ಲಿ ಬಂಧನ ಕೇಂದ್ರಗಳಲ್ಲಿ ಎರಡು ವರ್ಷಕ್ಕಿಂತ ಹೆಚ್ಚು ಅವಧಿ ಪೂರೈಸಿರುವ ವ್ಯಕ್ತಿಗಳನ್ನು ಬಿಡುಗಡೆ ಮಾಡುವಂತೆ ಕೋರಿ ಸಲ್ಲಿಸಲಾದ ಮನವಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ.

**ಉದಯರಶ್ಮಿ ದಿನಪತ್ರಿಕೆ**

# ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

ಈ ವರ್ಷದ ಬೇಸಿಗೆಯ ತಾಪಮಾನ ಬಹುತೇಕ ಇಡೀ ಕರ್ನಾಟಕದ ಜನರನ್ನು ಅಲುಗಾಡಿಸಿ ಬಿಟ್ಟಿತು. ಅದರಲ್ಲೂ ಮಧ್ಯಮ, ಕೆಳಮಧ್ಯಮ ಮತ್ತು ಬಡವರ್ಗದ ಜನರು ತಾಪಮಾನದ ಏರಿಕೆಯಿಂದ ತತ್ತರಿಸಿ ಹೋದರು. ಕೆಲವು ಜೀವಗಳು ಹೊರಟೇ ಹೋದವು. ಇನ್ನೊಂದಷ್ಟು ಜನ ಅನಾರೋಗ್ಯಗಳಿಗೆ ತುತ್ತಾದರು. ಪ್ರಾಣಿಪಕ್ಷಿಗಳು ಕಣ್ಣ ಮುಂದೆಯೇ ತುಂಬಾ ಒದ್ದಾಡಿದವು..

ಈಗ ಎರಡು ಮೂರು ದಿನದಿಂದ ಸ್ವಲ್ಪಮಟ್ಟಿಗೆ ಉಷ್ಣಾಂಶ ಕಡಿಮೆಯಾಗಿದೆ. ಆದ-ರೆ ಆ ತಾಪಮಾನದ ಹೊಡೆತ ನಮಗೆ ಒಂದು ಬಹುದೊಡ್ಡ ಪಾಠವಾಗಬೇಕು ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಪ್ರತಿ ವರ್ಷ ಹೀಗೆ ಒಂದೊಂದು




**ಉದಯರಶ್ಮಿ ದಿನಪತ್ರಿಕೆ**

ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಜಾಸ್ತಿಯಾಗುತ್ತಾ ಹೋಗುತ್ತದೆ ಎಂದು ಯಾರೋ ಬರೆದ ಒಂದು ಲೇಖನ ಪ್ರಸಾರವಾಗುತ್ತಿದೆ. ಅದು ಎಷ್ಟರಮಟ್ಟಿಗೆ ನಿಜವೋ ಗೊತ್ತಿಲ್ಲ. ಆದರೆ ಮುಂದೆಯೂ ಪರಿಸರವನ್ನು ಹೀಗೇ ನಿರ್ಲಕ್ಷಿಸಿದರೆ ಖಂಡಿತವಾಗಿಯೂ ತಾಪಮಾನದ ಹೊಡೆತಕ್ಕೆ ನಾವೆಲ್ಲರೂ ನಾಶವಾಗುವುದು ನಿಶ್ಚಿತ. ಅದಕ್ಕಾಗಿ ಆ ಹಂತ ತಲುಪುವ ಮುನ್ನವೇ ನಾವೆಲ್ಲ ಎಚ್ಚೆತ್ತು ಕೊಳ್ಳಬೇಕಾಗಿದೆ ಮತ್ತು ಆ ನಿಟ್ಟಿನಲ್ಲಿ ಒಂದಷ್ಟು ಕೆಲಸ ಮಾಡ ಬೇಕಾಗಿದೆ..



ಮುಖ್ಯವಾಗಿ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ಈ ವರ್ಷದ ಈಗ ಪ್ರಾರಂಭವಾಗಿರುವ ಮಳೆಗಾಲದಲ್ಲಿ ಕನಿಷ್ಠ ಒಂದು ಲಕ್ಷ ಗಿಡಗಳನ್ನು ಬೆಳೆಸುವ ಪ್ರತಿಜ್ಞೆ ಮಾಡಬೇಕು. ಹಾಗೆಯೇ ಹೋಬಳಿ ಮಟ್ಟದಲ್ಲಿ 10 ಲಕ್ಷ ಗಿಡಗಳು, ತಾಲೂಕು ಮಟ್ಟದಲ್ಲಿ 50 ಲಕ್ಷದಷ್ಟು ಗಿಡಗಳು ಮತ್ತು ಗ್ರೇಡ್-ಒನ್ ನಗರಗಳಲ್ಲಿ ಅಂದರೆ ಜಿಲ್ಲಾಮಟ್ಟದಲ್ಲಿ ಒಂದು ಕೋಟಿ ಗಿಡಮರಗಳನ್ನು ನೆಡುವ ಕಾರ್ಯಕ್ರಮವನ್ನು ತತ್‌ಕ್ಷಣದಿಂದಲೇ ಹಮ್ಮಿಕೊಳ್ಳಬೇಕು. ಸರ್ಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳ ಜಂಟಿ ನೇತೃತ್ವದಲ್ಲಿ ಇದನ್ನು ಆರಂಭಿಸಬೇಕು. ಅಂದರೆ ಇಡೀ ರಾಜ್ಯದಲ್ಲಿ ನೂರಾರು ಕೋಟಿ ಗಿಡಗಳನ್ನು ಈ ಮಳೆಗಾಲದ ಸಮಯದಲ್ಲಿ ನೆಟ್ಟರೆ ಕನಿಷ್ಠ ಅದರಲ್ಲಿ ತೀರಾ ಕಡಿಮೆ ಎಂದರೂ 30 ರಿಂದ 40 ಶೇಕಡಾ ಗಿಡಗಳು ಉಳಿಸಿ ಬೆಳೆಸುವಲ್ಲಿ ಯಶಸ್ವಿಯಾದರೆ ಎಷ್ಟೋ ಕೋಟಿ ಮರಗಳು ಬೆಳೆಯುತ್ತವೆ. ಇಡೀ ರಾಜ್ಯದಲ್ಲಿ ಅರಣ್ಯ ಪ್ರದೇಶ ತುಂಬಾ ಹೆಚ್ಚಾಗುತ್ತದೆ..

ಆಗ ಆಮ್ಲಜನಕ ಹೆಚ್ಚಾಗುತ್ತದೆ. ಮಳೆಯ ಕೊರತೆ ಕಡಿಮೆಯಾಗುತ್ತದೆ. ತಾಪಮಾನದ ಕುಸಿತ, ಮನಸ್ಸಿನ ಆಹ್ಲಾದ, ಆರೋಗ್ಯ ಎಲ್ಲವುಗಳಲ್ಲಿ ಕೆಲವೇ ವರ್ಷದಲ್ಲಿ ಕ್ರಾಂತಿಕಾರಕ ಬದಲಾವಣೆ ಉಂಟು ಮಾಡುತ್ತದೆ..

ಇಷ್ಟನ್ನು ಸಹ ನಮ್ಮಿಂದ ಮಾಡಲು ಸಾಧ್ಯವಿಲ್ಲವೇ ! ಪ್ರಕೃತಿ ತನ್ನ ಕಷ್ಟ ಸಹಿಸಿ ನಮಗೆ ಸಹಾಯ ಮಾಡುತ್ತದೆ. ನಾವು ಆ ಪರಿಸರವನ್ನು ಉಳಿಸಲು ಇಷ್ಟೂ ಪ್ರಯತ್ನ ಪಡದಿದ್ದರೆ ನಮಗೆ ಕ್ಷಮೆಯೇ ಇಲ್ಲ..

ಯಾರು ಏನು ಮಾಡುತ್ತಿರೋ ಗೊತ್ತಿಲ್ಲ. ಅವರವರ ಸಾಮರ್ಥ-ರ್ಯಕ್ಕೆ ತಕ್ಕಂತೆ ಸರ್ಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ಹಾಗೂ



ಸಾಮಾನ್ಯ ಜನರು ದಯವಿಟ್ಟು ಇದನ್ನು ಒಂದು ದೊಡ್ಡ ಅಭಿಯಾನವಾಗಿ ಪ್ರಾರಂಭಿಸಿ, ಮಳೆಗಾಲದಲ್ಲಿ ಗಿಡ ನೆಟ್ಟರೆ, ನೀರು ಉಣಿಸುವ ತೊಂದರೆಯೂ ಇರುವುದಿಲ್ಲ. ಸಹಜವಾಗಿಯೇ ಮಳೆ ನೀರಿನಲ್ಲಿ ಅವು ಬೆಳೆಯುತ್ತವೆ. ಸ್ವಲ್ಪ ಸಸಿ ದೊಡ್ಡದಾಗುವವರೆಗೂ ಒಂದಷ್ಟು ಜಾಗೃತಿ ವಹಿಸಿದರೆ ಸಾಕು..


ಯೋಚಿಸಿ, ಏನನ್ನಾದರೂ ಮಾಡಿ. ಮುಂದಿನ ವರ್ಷಕ್ಕೆ ಇಷ್ಟೊಂದು ತಾಪಮಾನ ಹೆಚ್ಚಾಗದ



ನಿಯಂತ್ರಿಸಲು ನಮ್ಮ ನಮ್ಮ ಕರ್ತವ್ಯ ನಿರ್ವಹಿಸೋಣ. ಈ ವರ್ಷದ ಭೀಕರ ಬಿಸಿಲನ್ನು ಮರೆಯುವುದು ಬೇಡ. ಅದು ಸದಾ ನೆನಪಾಗಿ ಗಿಡ ಬೆಳೆಸುವ ಕೆಲಸ ವೇಗ ಪಡೆಯಲಿ..

ಹಾಗೆಯೇ, ಫ್ಲೈ ಓವರ್ ಗಳು, ಅನಾವಶ್ಯಕವಾದ ಉದ್ದುದ್ದ, ಹೆಚ್ಚು ಅಗಲದ ರಸ್ತೆಗಳು ಮುಂತಾದವುಗಳನ್ನು ಕಡಿಮೆ ಮಾಡಿ, ಆ ಜಾಗದಲ್ಲಿ ಕೆರೆಕಟ್ಟೆಗಳು, ಇಂಗು ಗುಂಡಿಗಳು ಮುಂತಾದ ನೀರಾವರಿ ಯೋಜನೆಗಳು, ನೀರಿನ ಸಂಗ್ರಹ ಕಾಲುವೆಗಳ ಬಗ್ಗೆ ಹೆಚ್ಚು ಗಮನಹರಿಸುವಂತೆ ಸ್ಥಳೀಯ ಜನರು ಅಲ್ಲಿನ ಆಡಳಿತ ಮತ್ತು ರಾಜಕೀಯ ವ್ಯವಸ್ಥೆಯನ್ನು ಒತ್ತಾಯಿಸಬೇಕಾಗುತ್ತದೆ. ಅಭಿವೃದ್ಧಿಯ ಪರಿಕಲ್ಪನೆಯನ್ನು ನಾವು ಬದಲಾಯಿಸಿಕೊಳ್ಳದಿದ್ದರೆ ಇಡೀ ದೇಶ ಸಿಮೆಂಟ್ ಕಾಡಾಗಿ ತಾಪಮಾನ, ಬರಗಾಲ ನಮ್ಮನ್ನು ನಿರಂತರವಾಗಿ ಕಾಡುತ್ತದೆ. ನಮ್ಮ ಮುಂದಿನ ಪೀಳಿಗೆಗೆ ನಾವು ಅತ್ಯಂತ ಅಪಾಯಕಾರಿ ವಾತಾವರಣವನ್ನು ಕೊಡುಗೆಯಾಗಿ ನೀಡಿದಂತಾಗುತ್ತದೆ.

ಅವರು ನಮ್ಮನ್ನು ಕ್ಷಮಿಸುವುದಿಲ್ಲ..



**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR